ಬೆಂಗಳೂರಿನ ಶಾಸಕರ ಭವನದ ಸಭಾಂಗಣದಲ್ಲಿ ಶುಕ್ರವಾರ ನಡೆದ 'ಶಾಸಕಾಂಗ ಹಾಗೂ ನ್ಯಾಯಾಂಗಗಳ ಸಂಬಂಧ' ಕುರಿತ ವಿಚಾರ ಸಂಕಿರಣದಲ್ಲಿ ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯಿಲಿ, ಪರಿಷತ್ತಿನ ಸಭಾಪತಿ ವಿ.ಆರ್. ಸುದರ್ಶನ್, ಸುಪ್ರೀಂಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಸ್. ರಾಜೇಂದ್ರಬಾಬು ಹಾಗೂ ನ್ಯಾಯಮೂರ್ತಿ ಎಂ. ರಾಮಾಜೋಯಿಸ್ ಭಾಗವಹಿಸಿದ್ದರು.

ಆದೆಲ್ಲ ಮಾಧ್ಯಮಗಳ ಸೃಷ್ಟಿ: ವಿಚಾರ ಸಂಕಿರಣ ಅಭಿಮತ

ಶಾಸಕಾಂಗ- ನ್ಯಾಯಾಂಗದ ನಡುವೆ ಸಂಘರ್ಷ ಇಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೃತ್ತಿ ಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನ ವಿಚಾರದಲ್ಲಿ ಶಾಸಕಾಂಗ ಹಾಗೂ ನ್ಯಾಯಾಂಗದ ನಡುವೆ ಯಾವುದೇ ಸಂಘರ್ಷ ಇಲ್ಲ ಎಂಬ ಅಭಿಪ್ರಾಯ ಶುಕ್ರವಾರ ಇಲ್ಲಿ ವ್ಯಕ್ತವಾಯಿತು.

ವಿಧಾನ ಪರಿಷತ್ತು, ಶಾಸಕರ ಭವನದ ಸಮ್ಮೇಳನ ಸಭಾಂಗಣದಲ್ಲಿ ಏರ್ಪಡಿಸಿದ್ದ 'ಶಾಸಕಾಂಗ ಹಾಗೂ ನ್ಯಾಯಾಂಗಗಳ ಸಂಬಂಧ' ಕುರಿತ ವಿಚಾರ ಸಂಕಿರಣದಲ್ಲಿ ಈ ಅಭಿಪ್ರಾಯ ವ್ಯಕ್ತವಾಯಿತು.

ವಿಚಾರ ಸಂಕಿರಣದಲ್ಲಿ ಮೊದಲು ವಿಷಯ ಮಂಡಿಸಿದ ಸುಪ್ರೀಂಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಸ್. ರಾಜೇಂದ್ರಬಾಬು, 'ಸುಪ್ರೀಂಕೋರ್ಟ್ ತೀರ್ಪಿನ ಬಗ್ಗೆ ಶಾಸಕಾಂಗ – ನ್ಯಾಯಾಂಗದ ಮಧ್ಯೆ ಯಾವುದೇ ಸಂಘರ್ಷ ಇಲ್ಲ. ಆದರೆ ಮಾಧ್ಯಮಗಳೇ ಈ ಗೊಂದಲವನ್ನು ಸೃಷ್ಟಿಸಿವೆ' ಎಂದು ಅಭಿಪ್ರಾಯಪಟ್ಟರು.

'ಸುಪ್ರೀಂಕೋರ್ಟ್‌ನ ತೀರ್ಪು ಕುರಿತಂತೆ ದೇಶದಾದ್ಯಂತ ಟೀಕೆಗಳು ಕೇಳಿ ಬರುತ್ತಿದ್ದರೂ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸುವ ಅಗತ್ಯವಿಲ್ಲ' ಎಂದೂ ಅವರು ಪ್ರತಿಪಾದಿಸಿದರು.

ಶಾಸನ ರೂಪಿಸುವುದೊಂದೇ ಮಾರ್ಗ: 'ವೃತ್ತಿ ಶಿಕ್ಷಣ ಕೋರ್ಸ್‌ನ ಪ್ರವೇಶಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಶಾಸನ ರಚಿಸುವುದೊಂದೇ ಉಳಿದಿರುವ ಮಾರ್ಗ' ಎಂದು ಕೇಂದ್ರ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಎಂ. ವೀರಪ್ಪ ಮೊಯಿಲಿ ಸಲಹೆ ಮಾಡಿದರು.

'ವೃತ್ತಿ ಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ನೀಡಿರುವ ತೀರ್ಪಿನ ವಿಚಾರದಲ್ಲಿ ಶಾಸಕಾಂಗ ಹಾಗೂ ನ್ಯಾಯಾಂಗದ ಮಧ್ಯೆ ಸಂಘರ್ಷದ ಪ್ರಶ್ನೆಯೇ ಇಲ್ಲ' ಎಂದು ಪ್ರತಿಪಾದಿಸಿದ ಅವರು, 'ಉನ್ನಿಕೃಷ್ಣನ್ ತೀರ್ಪು ರದ್ದುಗೊಳಿಸಿದ ಸಂದರ್ಭದಲ್ಲಿಯೇ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಎಚ್ಚೆತ್ತುಕೊಂಡು ಸಮಗ್ರ ಶಾಸನ ಜಾರಿಗೆ ತರಲು ಮುಂದಾಗಬೇಕಿತ್ತು' ಎಂದರು.

'ಕರ್ನಾಟಕ ಸರ್ಕಾರ ರಚಿಸಿದ ಸಿಇಟಿ ವ್ಯವಸ್ಥೆ ಎಷ್ಟು ವೈಜ್ಞಾನಿಕವಾಗಿದ್ದು, ಇದು ಹೇಗೆ ಸಾಮಾಜಿಕ ನ್ಯಾಯದ ಪರವಾಗಿದೆ ಎಂಬುದರ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸುಪ್ರೀಂಕೋರ್ಟ್‌ನಲ್ಲಿ ಸಮರ್ಥ ವಾದ ಮಂಡಿಸುವಲ್ಲಿ ವಿಫಲವಾಗಿವೆ' ಎಂದು ವಿಷಾದಿಸಿದರು.

'ಕೇಂದ್ರ ಸರ್ಕಾರ ರೂಪಿಸಿರುವ ಉದ್ದೇಶಿತ ಶಾಸನ ಕರಡು ಪ್ರತಿ ಸಮಗ್ರವಾಗಿಲ್ಲ. ಇದರಲ್ಲಿ ಮೀಸಲಾತಿ ಹಾಗೂ ಸಾಮಾಜಿಕ ನ್ಯಾಯದಂತಹ ಅಂಶಗಳನ್ನು ಸೇರಿಸುವ ಅಗತ್ಯವಿದೆ' ಎಂದು ಮೊಯಿಲಿ ಪ್ರತಿಪಾದಿಸಿದರು.

'ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳೇ ಪ್ರತ್ಯೇಕ ಸಿಇಟಿ ನಡೆಸಿದಲ್ಲಿ ರಾಜ್ಯದ ವಿದ್ಯಾರ್ಥಿಗಳಿಗೆ ಒಂದು ಸೀಟು ಕೂಡ ದೊರೆಯದೆ ಎಲ್ಲವೂ ಬೇರೆಯವರ ಪಾಲಾಗುವ ಅಪಾಯವಿದೆ' ಎಂದು ಮೊಯಿಲಿ ಆತಂಕ ವ್ಯಕ್ತಪಡಿಸಿದರು.

'ಇಂತಹ ಸ್ಥಿತಿ ನಿರ್ಮಾಣವಾದಾಗ ಭಾರತೀಯ ವೈದ್ಯಕೀಯ ಮಂಡಳಿ ಅಥವಾ ಎಐಸಿಟಿಇ ನಿಯಮಗಳ ಅಗತ್ಯವೇನಿರುತ್ತದೆ' ಎಂದು ಪ್ರಶ್ನಿಸಿದರು.

ಸಂವಿಧಾನವೇ ಸುಪ್ರೀಂ: 'ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗಕ್ಕಿಂತ ಸಂವಿಧಾನವೇ ಸುಪ್ರೀಂ' ಎಂದು ನಿವೃತ್ತ ನ್ಯಾಯಮೂರ್ತಿ ಎಂ. ರಾಮಾಜೋಯಿಸ್ ಅಭಿಪ್ರಾಯಪಟ್ಟರು.

'ಸಂವಿಧಾನದ ಚೌಕಟ್ಟಿನೊಳಗೇ ನ್ಯಾಯಾಂಗ ಕೆಲಸ ಮಾಡಬೇಕಾಗಿದೆ. ಆದರೆ ಸರ್ಕಾರ ತಪ್ಪು ಮಾಡಿದಾಗ ಮಾತ್ರ ಅದನ್ನು ದಂಡಿಸುವ ಅಧಿಕಾರ ನ್ಯಾಯಾಂಗಕ್ಕಿದೆ. ಈ ಚೌಕಟ್ಟಿನಲ್ಲಿಯೇ ಸುಪ್ರೀಂಕೋರ್ಟ್ ಕೂಡ ಕೆಲಸ ಮಾಡಿಕೊಂಡು ಬರುತ್ತಿದೆ' ಎಂದು ಪ್ರತಿಪಾದಿಸಿದರು.

'ವೃತ್ತಿ ಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕೆ ಸಂಬಂಧಿಸಿದ ಪ್ರಕರಣದಲ್ಲಿಯೂ ಸುಪ್ರೀಂ ಕೋರ್ಟ್ ಕಾನೂನು ರೂಪಿಸುವಂತೆ ಕೇಂದ್ರ ಸರ್ಕಾರಕ್ಕೆ ಸ್ಪಷ್ಟವಾಗಿ ಸಲಹೆ ಮಾಡಿದೆ. ಹೀಗಾಗಿ ಸಾಮಾಜಿಕ ನ್ಯಾಯ ಕಲ್ಪಿಸುವ ನಿಟ್ಟಿನಲ್ಲಿ ಕಾನೂನು ರೂಪಿಸುವುದು ಸರ್ಕಾರಕ್ಕೆ ಬಿಟ್ಟ ವಿಚಾರ. ಅದು ಸಂವಿಧಾನದ ಆಶಯಕ್ಕೆ ವಿರುದ್ಧವಾಗಿದ್ದರೆ ಮಾತ್ರ ಆಕ್ಷೇಪವೆತ್ತಲು ಅವಕಾಶವಿದೆ' ಎಂದರು.

ಹಿರಿಯ ಸಂಸದೀಯ ಪಟು ಎಂ.ಸಿ. ನರಸಿಂಹನ್ ಮಾತನಾಡಿ, 'ಟಿ.ಎಂ.ಎ.ಪೈ ಪ್ರಕರಣದ ತೀರ್ಪಿನ ನಂತರ ವೃತ್ತಿ ಶಿಕ್ಷಣ ವ್ಯಾಪಾರೀಕರಣವಾಗುತ್ತಿದ್ದು, ಅದು ಸೇವೆಯಾಗಿ ಉಳಿದಿಲ್ಲ' ಎಂದು ವಿಷಾದಿಸಿದರು.

ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಪ್ರೊ. ರವಿವರ್ಮಕುಮಾರ್ ಕಾರ್ಯಕ್ರಮ ನಿರೂಪಿಸಿದರು. ವಿಧಾನ ಪರಿಷತ್ತಿನ ಸಭಾಪತಿ ವಿ.ಆರ್. ಸುದರ್ಶನ್ ಪ್ರಾಸ್ತಾವಿಕ ಭಾಷಣ ಮಾಡಿದರು.

ಇದೇ ಸಂದರ್ಭದಲ್ಲಿ ಅಮೆರಿಕದ 'ಅಕ್ಕ ಕನ್ನಡ ಬಳಗ'ದ ಅಧ್ಯಕ್ಷ ಡಾ.ಅಮರನಾಥ್‌ಗೌಡ ಅವರಿಗೆ ವಿಧಾನಮಂಡಲದ ವತಿಯಿಂದ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು.

ವಿಧಾನ ಪರಿಷತ್ತಿನ ಸದಸ್ಯರಾದ ವಿ.ಎಸ್. ಉಗ್ರಪ್ಪ, ಡಾ.ಎಲ್. ಹನುಮಂತಯ್ಯ ಚರ್ಚೆಯಲ್ಲಿ ಪಾಲ್ಗೊಂಡರು. ಪರಿಷತ್ತಿನ ಕಾರ್ಯದರ್ಶಿ ಕೆ. ಜಯಶಂಕರಮೂರ್ತಿ ಉಪಸ್ಥಿತರಿದ್ದರು.

ಚಿನ್ನದ ಗಣಿಯಲ್ಲಿ ಕಳುವಿಗೆ ಯತ್ನ: ಮೂವರಿಗೆ ಗಾಯ

ಗುಂಡೇಟಿಗೆ ಇಬ್ಬರು ಬಲಿ

ಪ್ರಜಾವಾಣಿ ವಾರ್ತೆ

ಕೆ.ಜಿ.ಎಫ್: ಬಿಜಿಎಂಎಲ್(ಭಾರತ್ ಗೋಲ್ಡ್ ಮೈನ್ಸ್ ಲಿಮಿಟೆಡ್)ನ ಮೈಸೂರು ಮೈನ್ಸ್ ಮಿಲ್‌ನಲ್ಲಿ ಕಳ್ಳತನ ಮಾಡಲು ಬಂದ ಗುಂಪಿನ ಮೇಲೆ ಗಣಿ ಭದ್ರತಾ ಸಿಬ್ಬಂದಿ ಗುಂಡು ಹಾರಿಸಿದ ಪರಿಣಾಮ ಇಬ್ಬರು ಸ್ಥಳದಲ್ಲೇ ಮೃತಪಟ್ಟು, ಮೂವರು ಗಾಯಗೊಂಡ ಘಟನೆ ಶುಕ್ರವಾರ ಮಾರಿಕುಪ್ಪಂನಲ್ಲಿ ನಡೆದಿದೆ.

ಮೃತಪಟ್ಟವರನ್ನು ಆಂಡರಸನ್‌ಪೇಟೆ ಪೊಲೀಸ್ ಠಾಣೆ ವ್ಯಾಪ್ತಿಯ ಸೂಸೈಪಾಳ್ಯದ ನಿವಾಸಿಗಳಾದ ಸೌಂದರ್ (25) ಹಾಗೂ ವೆನಿಸ್ (38) ಎಂದು ಗುರುತಿಸಲಾಗಿದೆ. ಬಿಜಿಎಂಎಲ್ ಕಾರ್ಯನಿರ್ವಹಿಸುತ್ತಿದ್ದಾಗ ಚಿನ್ನದ ಸಂಸ್ಕರಣೆಗಾಗಿ ಉಪಯೋಗಿಸಲಾಗುತ್ತಿದ್ದ ಮೈಸೂರು ಮಿಲ್‌ಗೆ ಶುಕ್ರವಾರ ಬೆಳಿಗ್ಗೆ ಹನ್ನೊಂದು ಗಂಟೆ ವೇಳೆಗೆ ಸುಮಾರು 25- 30 ಜನರಿದ್ದ ಗುಂಪು ಕಳ್ಳತನಕ್ಕಾಗಿ ಗೋಡೆಯ ಭದ್ರತಾ ತಂತಿಗಳನ್ನು ಮುರಿದು ಪ್ರವೇಶಿಸಿದೆ. ಏಕಾಏಕಿ ನುಗ್ಗಿದ ಗುಂಪಿಗೆ ಬಂದೂಕು ತೋರಿಸಿ ಹಿಮ್ಮೆಟ್ಟಿಸಲು ಮೂವರು ಭದ್ರತಾ ಸಿಬ್ಬಂದಿ ಪ್ರಯತ್ನ ನಡೆಸಿದ್ದಾರೆ.

ಗೋಡೆ ಹಾರಿ ಒಳಗೆ ಬಂದ ಗುಂಪು ನಂತರ ಭದ್ರತಾ ಸಿಬ್ಬಂದಿ ಜೊತೆ ವಾಗ್ವಾದಕ್ಕೆ ಇಳಿದಿದ್ದು, ಬೇರೆ ಗುಂಪಿಗೆ ಕಳ್ಳತನ ಮಾಡಲು ಅವಕಾಶ ಮಾಡಿಕೊಡಲಾಗುತ್ತಿದ್ದು ಅದರಂತೆ ನಮಗೂ ಅವಕಾಶ ಮಾಡಿಕೊಡಿ ಎಂದು ಭದ್ರತಾ ಸಿಬ್ಬಂದಿಯನ್ನು ಒತ್ತಾಯಿಸಿದ್ದಾರೆ. ಭದ್ರತಾ ಸಿಬ್ಬಂದಿ, ಕಳ್ಳರ ಒತ್ತಾಯಕ್ಕೆ ಮಣಿಯದಿದ್ದಾಗ, ಸಿಬ್ಬಂದಿ ಮೇಲೆ ಕಬ್ಬಿಣದ ಸಲಾಕೆಗಳಿಂದ ಹಲ್ಲೆ ನಡೆಸಲು ಪ್ರಯತ್ನಿಸಿದ್ದಾರೆ.

ಕಳ್ಳರ ಗುಂಪು ಹಲ್ಲೆ ನಡೆಸಲು ಒಮ್ಮೆಲೆ ನುಗ್ಗಿದ ಹಿನ್ನೆಲೆಯಲ್ಲಿ ಭದ್ರತಾ ಸಿಬ್ಬಂದಿ ಮೊದಲಿಗೆ ಗಾಳಿಯಲ್ಲಿ ಒಂದು ಸುತ್ತು ಗುಂಡು ಹಾರಿಸಿದ್ದಾರೆ. ಗುಂಪು ಇದಕ್ಕೂ ಜಗ್ಗದೆ ಇದ್ದಾಗ ಡಬ್ಬಲ್ ಬ್ಯಾರೆಲ್ ಗನ್‌ನಿಂದ ಹಾರಿದ ಗುಂಡಿಗೆ ಸ್ಥಳದಲ್ಲೇ ಇಬ್ಬರು ಕುಸಿದು ಬಿದ್ದರು. ಅದರಿಂದ ಭಯಭೀತರಾಗಿ ಓಡುತ್ತಿದ್ದ ಗುಂಪು ಬಿದ್ದವರನ್ನು ಎತ್ತಿಕೊಂಡು ಪರಾರಿಯಾಯಿತು.

ನಂತರ ಇಬ್ಬರ ದೇಹಗಳನ್ನೂ ಇಲ್ಲಿನ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ ತಂದಾಗ, ಮೃತಪಟ್ಟಿರುವುದನ್ನು ವೈದ್ಯರು ದೃಢಪಡಿಸಿದರು. ಭದ್ರತಾ ಸಿಬ್ಬಂದಿ ಹಾರಿಸಿದ ಗುಂಡಿನಿಂದಾಗಿ ಇನ್ನೂ ಮೂವರು ಗಾಯಗೊಂಡು ಬೇರೆ ಬೇರೆ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎನ್ನಲಾಗಿದೆ. ಗಣಿ ಭದ್ರತಾ ಸಿಬ್ಬಂದಿ ದೂರು ನೀಡಿದ್ದು, ಮಾರಿಕುಪ್ಪಂ ಪೊಲೀಸರು ಪ್ರಕರಣ ದಾಖಲು ಮಾಡಿಕೊಂಡಿದ್ದಾರೆ.

ವಿಜ್ಞಾನ, ಅಣ್ವಸ್ತ್ರ ತಂತ್ರಜ್ಞಾನ ವಿನಿಮಯ

ಅಕ್ಟೋಬರ್‌ನಲ್ಲಿ ಭಾರತ – ಅಮೆರಿಕ ಒಡಂಬಡಿಕೆ: ಸಚಿವ ಕಪಿಲ್ ಸಿಬಾಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜ್ಞಾನ ಮತ್ತು ತಂತ್ರಜ್ಞಾನ, ಅಣ್ವಸ್ತ್ರ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ತಂತ್ರಜ್ಞಾನದ ವಿನಿಮಯ, ಮತ್ತು ಪರಸ್ಪರ ಸಹಕಾರ ಕುರಿತು ಈ ವರ್ಷದ ಅಕ್ಟೋಬರ್‌ನಲ್ಲಿ ತಿಂಗಳಲ್ಲಿ ಭಾರತ ಮತ್ತು ಅಮೆರಿಕ ಒಡಂಬಡಿಕೆಗೆ ಸಹಿ ಹಾಕಲಿವೆ.

ನಗರದಲ್ಲಿ 'ವಿಜ್ಞಾನ ಮತ್ತು ತಂತ್ರಜ್ಞಾನದ ಅವಕಾಶಗಳು ಹಾಗೂ ಭಾರತ –ಅಮೆರಿಕ ಸಂಬಂಧ' ವಿಚಾರ ಸಂಕಿರಣ ಉದ್ಘಾಟಿಸಿದ ಕೇಂದ್ರದ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಕಪಿಲ್ ಸಿಬಾಲ್ ಈ ವಿಷಯ ತಿಳಿಸಿದರು.

'ಭಾರತ ಮತ್ತು ಅಮೆರಿಕ ನಡುವೆ ರಾಜಕೀಯ ಬಾಂಧವ್ಯ ಚೆನ್ನಾಗಿದೆ. ಆರ್ಥಿಕ, ವಾಣಿಜ್ಯ ಸಂಬಂಧವು ಚೆನ್ನಾಗಿದೆ. ಎರಡು ರಾಷ್ಟ್ರಗಳ ನಡುವೆ ವಿಜ್ಞಾನ, ತಂತ್ರಜ್ಞಾನ ಕ್ಷೇತ್ರಗಳಲ್ಲೂ ಉತ್ತಮ ಸಂಬಂಧ ಹೊಂದಲು ಅವಕಾಶವಿದೆ' ಎಂದು ಅಭಿಪ್ರಾಯಪಟ್ಟರು.

ಪ್ರಧಾನಿಗಳ ಇತ್ತೀಚಿನ ಅಮೆರಿಕ ಪ್ರವಾಸದ ಸಂದರ್ಭದಲ್ಲೇ ಆಗಬೇಕಿದ್ದ ಒಪ್ಪಂದ, ಈಗ ಆಗಲಿದೆ. ಮಾಹಿತಿ, ಜೈವಿಕ ತಂತ್ರಜ್ಞಾನ, ಅಣ್ವಸ್ತ್ರ, ಬಾಹ್ಯಾಕಾಶ ಕ್ಷೇತ್ರ, ನ್ಯಾನೋ ತಂತ್ರಜ್ಞಾನ ಮತ್ತಿತರ ಪ್ರಮುಖ ಕ್ಷೇತ್ರಗಳಲ್ಲಿ ಈ ತಂತ್ರಜ್ಞಾನದ ವಿನಿಮಯ ಮಾಡಿಕೊಳ್ಳಲು ಇದು ಸಹಕಾರಿಯಾಗಲಿದೆ ಎಂದರು.

ನಂತರ ಸುದ್ದಿಗಾರರರೊಂದಿಗೆ ಮಾತನಾಡಿ, 'ಬೌದ್ಧಿಕ ಆಸ್ತಿ ಹಕ್ಕುಗೆ ಸಂಬಂಧಿಸಿದ ಕೆಲ ವಿಷಯಗಳ ಬಗ್ಗೆ ಸ್ಪಷ್ಟನೆ ಕೋರಿದ್ದರಿಂದ ಒಪ್ಪಂದದಲ್ಲಿ ವಿಳಂಬವಾಗಿದೆ. ಒಪ್ಪಂದಕ್ಕೆ ಸಹಿ ಹಾಕಲು ಅಕ್ಟೋಬರ್‌ನಲ್ಲಿ ಅಮೆರಿಕಕ್ಕೆ ತೆರಳುತ್ತೇನೆ' ಎಂದು ತಿಳಿಸಿದರು.



ಬಂಡವಾಳ ಹೂಡಿ: 'ಭಾರತದಲ್ಲಿ ಕಡಿಮೆ ವೆಚ್ಚ ತಗುಲಲಿದ್ದು, ಅತ್ಯುತ್ತಮ ಮಾನವ ಸಂಪನ್ಮೂಲ ಇದೆ. ಹೀಗಾಗಿ ಜಾಗತಿಕ ಹಂತದಲ್ಲಿ ಭಾರತ ಉದ್ದಿಮೆ ಆರಂಭಿಸಲು ಸೂಕ್ತ ತಾಣವಾಗಿದೆ ಎಂದು ಹೇಳಿದರು.

ಈ ಕಾರಣದಿಂದ ವಿಶ್ವದ ಹೂಡಿಕೆದಾರರಿಗೆ ಭಾರತಕ್ಕೆ ಬರುವುದು ಅನಿವಾರ್ಯವಾಗಿದೆ. ಔಷಧ, ಇಂಧನ, ತಂತ್ರಜ್ಞಾನ, ಆರೋಗ್ಯ ಕ್ಷೇತ್ರಗಳಲ್ಲಿ ಬಂಡವಾಳ ಹೂಡಲು ಇಲ್ಲಿ ವ್ಯಾಪಕ ಅವಕಾಶವಿದೆ. ಆದರೆ, ಪರಸ್ಪರ ಎರಡು ರಾಷ್ಟ್ರಗಳಿಗೂ ಲಾಭದಾಯಕವಾಗಿ ಇರುವ ವಹಿವಾಟಿಗೆ ಭಾರತ ಒತ್ತು ನೀಡಲಿದೆ ಎಂದು ಸ್ಪಷ್ಟ ಪಡಿಸಿದರು.ಅಬ್ಸರ್ವರ್ ರೀಸರ್ಚ್ ಫೌಂಡೇಷನ್ ಸಂಸ್ಥೆ ಈ ವಿಚಾರಸಂಕಿರಣ ಏರ್ಪಡಿಸಿತ್ತು. ಸಂಸ್ಥೆಯ ಅಧ್ಯಕ್ಷ ಆರ್.ಕೆ.ಮಿಶ್ರಾ, ಅಪೊಲೋ ಆಸ್ಪತ್ರೆಯ ಡಾ ಪ್ರತಾಪ್ ರೆಡ್ಡಿ, ಚೆನ್ನೈ ಐ.ಐ.ಟಿಯ ಮಾಜಿ ನಿರ್ದೇಶಕ ಪ್ರೊ. ಪಿ.ವಿ.ಇಂದಿರೇಶನ್ ಹಾಜರಿದ್ದರು. ಸಂಸ್ಥೆಯ ಲಲಿತ್ ಭಾಸಿನ್ ಸ್ವಾಗತಿಸಿದರು. ಭರತ್ ಗೋಯೆಂಕಾ ವಂದಿಸಿದರು.

ದಕ್ಷಿಣ ಮಧ್ಯ ರೈಲ್ವೆ

ಅನುಕಂಪ ಆಧಾರಿತ ನೇಮಕಾತಿ ಪ್ರಕರಣಗಳ ಬಾಕಿಗೆ 1ನೇ ಅದಾಲತ್

ಪ್ರಕಟಣೆ

1. ದಕ್ಷಿಣ ಮಧ್ಯರೈಲ್ವೆಯು ಬಾಕಿ ಉಳಿದಿರುವ ಅನುಕಂಪ ಆಧಾರಿತ ನೇಮಾಕಾತಿ ಪ್ರಕರಣಗಳಿಗೆ ಅದಾಲತ್–2005 ಅನ್ನು 10ನೇ ನವಂಬರ್ 2005ರಂದು ವಲಯ ಕೇಂದ್ರ ಕಾರ್ಯಸ್ಥಾನ ಹಾಗೂ ವಿಭಾಗಗಳ ಕೇಂದ್ರ ಕಾರ್ಯಸ್ಥಾನಗಳಲ್ಲೂ ಕೂಡ ಏಕಕಾಲದಲ್ಲಿ ನಡೆಸುತ್ತಿದೆ.

2. ವಲಯ ಕೇಂದ್ರಕಾರ್ಯಸ್ಥಾನಗಳಲ್ಲಿ (ರೈಲ್‌ನಿಲಯಂ/ ಸಿಕಂದರಾಬಾದ್) ನಡೆಯುವ ಅದಾಲತ್‌ನಲ್ಲಿ ಈ ಕೆಳಗೆ ತಿಳಿಸಿರುವ ಯುನಿಟ್‌ಗಳಿಗೆ ಸಂಬಂಧಿಸಿದ ಪ್ರಕರಣಗಳ ಬಗ್ಗೆ ವ್ಯವಹರಿಸಲಾಗುವುದು.
   ಕೇಂದ್ರ ಕಾರ್ಯಸ್ಥಾನ ಸಿಬ್ಬಂದಿ (ರೈಲ್ ನಿಲಯಂ)
   ಸಿಕಂದರಾಬಾದ್ ಪ್ರದೇಶದಲ್ಲಿರುವ ಎಲ್ಲಾ ಕಾರ್ಯಾಗಾರಗಳು/ ಯುನಿಟ್‌ಗಳ ಸಿಬ್ಬಂದಿ.

3. ವಿಭಾಗಗಳ ಕೇಂದ್ರ ಕಾರ್ಯಸ್ಥಾನಗಳಲ್ಲಿ ನಡೆಯುವ ಅದಾಲತ್‌ನಲ್ಲಿ ಆ ಪ್ರದೇಶದಲ್ಲಿನ ಸಂಬಂಧಪಟ್ಟ ವಿಭಾಗಗಳು/ಕಾರ್ಯಾಗಾರಗಳು/ ಯುನಿಟ್‌ಗಳಿಗೆ ಸಂಬಂಧಪಟ್ಟಂತೆ ಸೇವೆಸಲ್ಲಿಸುತ್ತಿದ್ದಾಗ ಮೃತರಾದ/ ವೈದ್ಯಕೀಯವಾಗಿ ಅಸಮರ್ಥರಾದ/ಕಾಣೆಯಾದ ನೌಕರರುಗಳ ಪ್ರಕರಣಗಳ ಬಗ್ಗೆ ವ್ಯವಹರಿಸಲಾಗುವುದು.

4. ಅನುಕಂಪ ಆಧಾರಿತ ನೇಮಕಾತಿಯ ಬಗ್ಗೆ ಕುಂದುಕೊರತೆಗಳನ್ನು ಹೊಂದಿರುವ ಮೃತರಾದಂತಹ/ ವೈದ್ಯಕೀಯವಾಗಿ ಅಸಮರ್ಥರಾದ/ ಕಾಣೆಯಾದ ನೌಕರರ ವಿಧವೆಯರು/ ವಾರ್ಡ್‌ಗಳು/ ಅವಲಂಬಿತರು ಈ ಕೊನೆಯಲ್ಲಿ ನೀಡಿರುವ ನಮೂನೆಯಲ್ಲಿ ಪೂರ್ಣವಿವರಗಳನ್ನು ನೀಡಿ ಈ ಕೆಳಗೆ ತಿಳಿಸಿರುವ ಸಂಬಂಧಪಟ್ಟ ಅಧಿಕಾರಿಗಳಿಗೆ ಅವರ ಮನವಿಗಳನ್ನು ಸಲ್ಲಿಸಬಹುದು.

ಎ. ವಲಯ ಕೇಂದ್ರಕಾರ್ಯಸ್ಥಾನ (ರೈಲ್‌ನಿಲಯಂ) ಸಿಕಂದರಾಬಾದ್, ಸಿಕಂದರಾಬಾದ್‌ನಲ್ಲಿರುವ ಕೇಂದ್ರ ಕಾರ್ಯಸ್ಥಾನ. ಕಾರ್ಯಾಗಾರಗಳು ಮತ್ತು ಇತರೆ ಯುನಿಟ್‌ಗಳು.
ಸೀನಿಯರ್ ಪರ್ಸೊನೆಲ್ ಆಫೀಸರ್ (ಆರ್‌ಇಎಸ್ ಅಂಡ್ ಆರ್‌ಸಿಟಿಟಿ)
ಕೇಂದ್ರ ಕಾರ್ಯಸ್ಥಾನ ಕಛೇರಿ, ಸಿಪಿಒ ರವರ ಕಚೇರಿ, 4ನೇ ಅಂತಸ್ತು, ರೈಲ್ ನಿಲಯಂ, ದಕ್ಷಿಣ ಮಧ್ಯರೈಲ್ವೆ, ಸಿಕಂದರಾಬಾದ್–500017

ಬಿ. ಸಿಕಂದರಾಬಾದ್‌ನಲ್ಲಿ: ಸಿಕಂದರಾಬಾದ್ ವಿಭಾಗ ಮತ್ತು ಅದರ ಯುನಿಟ್‌ಗಳ ಸಿಬ್ಬಂದಿ.
ಸೀನಿಯರ್/ ಡಿವಿಜನಲ್ ಪರ್ಸೊನೆಲ್ ಆಫೀಸರ್
ದಕ್ಷಿಣ ಮಧ್ಯರೈಲ್ವೆ, ಸಿಕಂದರಾಬಾದ್

ಸಿ. ಸಿಕಂದರಾಬಾದ್‌ನಲ್ಲಿ: ಹೈದಾರಾಬಾದ್ ವಿಭಾಗ ಮತ್ತು ಅದರ ಯುನಿಟ್‌ಗಳ ಸಿಬ್ಬಂದಿ.
ಸೀನಿಯರ್/ ಡಿವಿಜನಲ್ ಪರ್ಸೊನೆಲ್ ಆಫೀಸರ್
ದಕ್ಷಿಣ ಮಧ್ಯರೈಲ್ವೆ, ಹೈದಾರಾಬಾದ್ ವಿಭಾಗ ಸಿಕಂದರಾಬಾದ್.

ಡಿ. ವಿಜಯವಾಡದಲ್ಲಿ: ವಿಜಯವಾಡ ವಿಭಾಗ, ಆರ್‌ವೈಪಿಎಸ್ ಕಾರ್ಯಾಗಾರಗಳು, ವಿಜಯವಾಡ ಪ್ರದೇಶದ ಭಾಗೋಳಿಕ ವ್ಯಾಪ್ತಿಯಲ್ಲಿರುವ ಇತರೆ ಯುನಿಟ್‌ಗಳ ಕುಂದುಕೊರತೆಗಳು.
ಸೀನಿಯರ್ ಡಿವಿಜನಲ್ ಪರ್ಸೊನೆಲ್ ಆಫೀಸರ್, ದಕ್ಷಿಣ ಮಧ್ಯರೆಲ್ವೆ ವಿಜಯವಾಡ –520001.

ಇ. ಗುಂಟೂರಿನಲ್ಲಿ: ಗುಂತಕಲ್ ವಿಭಾಗ, ತಿರುಪತಿ ಕಾರ್ಯಾಗಾರ ಹಾಗೂ ಗುಂತಕಲ್ ವಿಭಾಗೀಯ ಪ್ರದೇಶದ ಭೌಗೋಳಿಕ ವ್ಯಾಪ್ತಿಯಲ್ಲಿನ ಇತರೆ ಯುನಿಟ್‌ಗಳ ಕುಂದುಕೊರತೆಗಳು.
ಸೀನಿಯರ್ ಡಿವಿಜನಲ್ ಪರ್ಸೊನೆಲ್ ಆಫೀಸರ್ ದಕ್ಷಿಣ ಮಧ್ಯರೈಲ್ವೆ, ಗುಂತಕಲ್–515801

ಎಫ್. ಗುಂತಕಲ್‌ನಲ್ಲಿ: ಗುಂಟೂರು ವಿಭಾಗದ ಕುಂದುಕೊರತೆಗಳು
ಡಿವಿಜನಲ್ ಪರ್ಸೊನರ್ನಲ್ ಆಫೀಸರ್ ದಕ್ಷಿಣ ಮಧ್ಯರೆಲ್ವೆ ಗುಂಟೂರು–520002

ಜಿ. **ನಾಂದೇಡ್‌ನಲ್ಲಿ:** ನಾಂದೇಡ್ ವಿಭಾಗದ ಕುಂದುಕೊರತೆಗಳು
ಸೀನಿಯರ್ ಡಿವಿಜನಲ್ ಪರ್ಸೊನಲ್ ಆಫೀಸರ್ ದಕ್ಷಿಣ ಮಧ್ಯರೈಲ್ವೆ, ನಾಂದೇಡ್.

5. ಸಂಬಂಧಪಟ್ಟ ವ್ಯಕ್ತಿಗಳಿಂದ ಮನವಿಗಳನ್ನು ಸ್ವೀಕರಿಸಲು ಕಡೆಯದಿನಾಂಕ: 30ನೇ ಸೆಪ್ಟೆಂಬರ್ 2005. ಅನುಕಂಪ ಆಧಾರಿತ ನೇಮಕಾತಿಗಳಿಗೆ ಅದಾಲತ್–2005ರಲ್ಲಿ ಈ ದಿನಾಂಕದ ನಂತರ ಸ್ವೀಕರಿಸಲ್ಪಡುವ ಕುಂದುಕೊರತೆಗಳ ಬಗ್ಗೆ ವ್ಯವಹರಿಸಲು ಸಾಧ್ಯವಿಲ್ಲವೆಂಬುದನ್ನು ಗಮನಿಸತಕ್ಕದ್ದು.

6. ಪ್ರಧಾನ ವ್ಯವಸ್ಥಾಪಕರಿಗೆ ಈಗಾಗಲೇ ಸಲ್ಲಿಸಲ್ಪಟ್ಟ ಮತ್ತು ತಿರಸ್ಕೃತವಾದ ಮನವಿಗಳನ್ನು ಪರಿಗಣಿಸುವುದಿಲ್ಲ.

7. ಅದಾಲತ್‌ನಲ್ಲಿ ಖುದ್ದಾಗಿ ಹಾಜರಾಗಲು ಅಪೇಕ್ಷಿಸಿದಲ್ಲಿ ಮನವಿದಾರರು ಪ್ರಯಾಣ ಮತ್ತು ವಾಸ್ತವ್ಯಕ್ಕೆ ತಮ್ಮ ಸ್ವಂತ ವ್ಯವಸ್ಥೆ ಮಾಡಿಕೊಳ್ಳಲು ಕೋರಲಾಗಿದೆ.

ನಮ್ಮ ವೆಬ್‌ಸೈಟನ್ನು www.scrailway.gov.in ಇಲ್ಲಿ ಸಂದರ್ಶಿಸಿರಿ.

ಪಿಯುಬಿ/1011/05

ಚೀಫ್ ಪರ್ಸೊನೆಲ್ ಆಫೀಸರ್
ಸಿಕಂದರಾಬಾದ್

ನಮೂನೆ

1. ಮೃತರಾದ/ವೈದ್ಯಕೀಯವಾಗಿ ಅಸಮರ್ಥರಾದ/ ಕಾಣೆಯಾದ ನೌಕರರ ಹೆಸರು : ....
2. ಹುಟ್ಟಿದ ದಿನಾಂಕ : ....
3. ನೇಮಕವಾದ ದಿನಾಂಕ : ....
4. ಕೊನೆಯದಾಗಿ ಕೆಲಸಮಾಡಿದಾಗ ಇದ್ದ ಹುದ್ದೆಯ ಹೆಸರು/ ದರ್ಜೆ/ ಸ್ಟೇಷನ್ : ....
5. ಮರಣದ/ ವೈದ್ಯಕೀಯವಾಗಿ ಅಸಮರ್ಥವಾದ/ ಕಾಣೆಯಾದ ದಿನಾಂಕ : ....
6. ಒಜಿ ನೇಮಕ ಅಪೇಕ್ಷಿಸಿರುವ ಅಭ್ಯರ್ಥಿಯ ವಿವರಗಳು : ....
   ಹೆಸರು : ....
   ನೌಕರನೊಂದಿಗಿರುವ ಸಂಬಂಧ : ....
   ಹುಟ್ಟಿದ ದಿನಾಂಕ : ....
   ಶೈಕ್ಷಣಿಕ ಅರ್ಹತೆಗಳು : ....
7. ಇದ್ದಪಕ್ಷ ಸಲ್ಲಿಸಲಾದ ಹಿಂದಿನ ಅರ್ಜಿಯ ದಿನಾಂಕ : ....
8. ಪತ್ರವ್ಯವಹಾರದ ವಿಳಾಸ : ....

ಭಾರತೀಯ ರೈಲ್ವೆಯ ಪ್ರಗತಿಯಲ್ಲಿ ಪಾಲುದಾರರಾಗಿ

ಸಿಲಿಕಾನ್ ವ್ಯಾಲಿಯಲ್ಲಿ ಇಂದು, ನಾಳೆ 'ಕನ್ನಡೋತ್ಸವ'

ಏಕೀಕರಣದ ಸುವರ್ಣ ಸಂಭ್ರಮಕ್ಕೆ ಅಮೆರಿಕನ್ನಡಿಗರ ಮುನ್ನುಡಿ

ಕ್ಯಾಲಿಫೋರ್ನಿಯಾ: ಅಮೆರಿಕ ನೆಲದಲ್ಲಿ ಕನ್ನಡ ಕಂಪಿನ ಹೊಸ ಅಲೆಯ ಅನಾವರಣಕ್ಕೆ ಅಮೆರಿಕನ್ನಡಿಗರು ಸಿದ್ಧತೆ ನಡೆಸುತ್ತಿದ್ದಾರೆ. ಸಿಲಿಕಾನ್ ವ್ಯಾಲಿಯಲ್ಲಿ ಕನ್ನಡದ ಪಕಳೆಗಳು ಮೆಲ್ಲನೆ ಅರಳುತ್ತಿವೆ; 'ಉತ್ತರ ಕ್ಯಾಲಿಫೋರ್ನಿಯಾ ಕನ್ನಡ ಕೂಟ' (ಕೆಕೆಎನ್‌ಸಿ) ಇಂದು ಮತ್ತು ನಾಳೆ (ಸೆ.3,4) ನಡೆಸುತ್ತಿರುವ 'ಕನ್ನಡೋತ್ಸವ'ದ ಮೂಲಕ.

ಸೆಪ್ಟಂಬರ್ ದಿನಗಳಲ್ಲಿ ಸಿಲಿಕಾನ್ ವ್ಯಾಲಿಯಲ್ಲಿ ಹಿತಕರ ಹವೆ ಇರುತ್ತದೆ. ಈ ಸಂದರ್ಭದಲ್ಲಿ ಕನ್ನಡಿಗರ ಸ್ನೇಹ ಮಿಲನ ನಡೆಯುತ್ತಿದೆ.

ಅಂದಹಾಗೆ, ಕರ್ನಾಟಕ ಏಕೀಕರಣದ ಸುವರ್ಣ ಮಹೋತ್ಸವ ನವಂಬರ್‌ನಿಂದ ಆರಂಭವಾಗುತ್ತಿದೆ, ನೆನಪಿದೆಯಾ? ಅಮೆರಿಕನ್ನಡಿಗರಿಗಂತೂ ನೆನಪಿದೆ. ಆ ಕಾರಣದಿಂದಲೇ ಐತಿಹಾಸಿಕ ಸಂದರ್ಭಕ್ಕೆ ಮುನ್ನುಡಿಯಾಗಿ ಸಿಲಿಕಾನ್ ವ್ಯಾಲಿಯಲ್ಲಿ 'ಕನ್ನಡೋತ್ಸವ' ಆಚರಿಸುತ್ತಿದ್ದಾರೆ.

ಕನ್ನಡ ಕೂಟದ ಸದಸ್ಯರು ಮಾತ್ರವಲ್ಲದೆ ಅಮೆರಿಕದ ಇತರ ಭಾಗಗಳ ಕನ್ನಡಿಗರೂ ಈ ಉತ್ಸವದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಸುಮಾರು ಒಂದೂವರೆ ಸಾವಿರ ಕನ್ನಡಿಗರು ಎರಡು ದಿನಗಳ ಉತ್ಸವದಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದೆ ಎಂದು 'ಕೆಕೆಎನ್‌ಸಿ' ಅಧ್ಯಕ್ಷ ರವಿ ಕೃಷ್ಣಾರೆಡ್ಡಿ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಅಮೆರಿಕದಲ್ಲಿನ ಕನ್ನಡ ಕೂಟಗಳ ಪ್ರಾತಿನಿಧಿಕ ಸಂಸ್ಥೆಯಾದ 'ಅಕ್ಕ' ಎರಡು ವರ್ಷಕ್ಕೊಮ್ಮೆ 'ವಿಶ್ವ ಕನ್ನಡ ಸಮ್ಮೇಳನ' ನಡೆಸುತ್ತದೆ. 2004ರ 'ಅಕ್ಕ ಸಮ್ಮೇಳನ' ಫ್ಲಾರಿಡಾದಲ್ಲಿ ನಡೆದಿತ್ತು. ಈ ಸಮ್ಮೇಳನದ ಆತಿಥ್ಯವನ್ನು 'ಶ್ರೀಗಂಧ' ಕನ್ನಡ ಕೂಟ ವಹಿಸಿತ್ತು.

2006ರ ಸಮ್ಮೇಳನ ವಾಷಿಂಗ್ಟನ್ ಡಿ.ಸಿ. ನಗರದಲ್ಲಿ 'ಕಾವೇರಿ' ಕನ್ನಡ ಸಂಘದ ಆತಿಥ್ಯದಲ್ಲಿ ನಡೆಯಲಿದೆ. 'ಅಕ್ಕ' ಸಮ್ಮೇಳನಗಳನ್ನು ಬಿಟ್ಟರೆ ಇಷ್ಟೊಂದು ದೊಡ್ಡ ಪ್ರಮಾಣದ ಕನ್ನಡ ಕಾರ್ಯಕ್ರಮ ಅಮೆರಿಕದ ನೆಲದಲ್ಲಿ ನಡೆಯುತ್ತಿರುವುದು ಇದೇ ಮೊದಲ ಸಲ.

ಹೇವರ್ಡ್‌ನ ಚಾಬೊಟ್ ಕಾಲೇಜಿನ ಸಭಾಂಗಣದಲ್ಲಿ ಕೆಕೆಎನ್‌ಸಿ ಕನ್ನಡೋತ್ಸವ ನಡೆಯಲಿದೆ. ಬೇ ಏರಿಯಾದಲ್ಲಿನ ಸುಸಜ್ಜಿತ ಹಾಗೂ ವಿಶಾಲವಾದ ಆಧುನಿಕ ರಂಗ ಮಂದಿರವಿದು.

ಸ್ಯಾನ್‌ಫ್ರಾನ್ಸಿಸ್ಕೋದಲ್ಲಿನ ಭಾರತೀಯ ರಾಯಭಾರಿ ಕಚೇರಿಯ ಅಧಿಕಾರಿ ಬಿ.ಎಸ್.ಪ್ರಕಾಶ್ ಹಾಗೂ ಧಾರವಾಡ ಕೃಷಿ ವಿಶ್ವ ವಿದ್ಯಾಲಯದ ವಿಶ್ರಾಂತ ಉಪ ಕುಲಪತಿ ಡಾ.ಎಂ. ಮಹದೇವಪ್ಪ ಅತಿಥಿಗಳಾಗಿ ಭಾಗವಹಿಸುವರು.

ಕನ್ನಡ ಸಂಸ್ಕೃತಿ – ಪರಂಪರೆ ಬಿಂಬಿಸುವ ಅನೇಕ ಕಾರ್ಯಕ್ರಮಗಳು ಉತ್ಸವದಲ್ಲಿ ನಡೆಯಲಿವೆ. ಪ್ರಕಾಶ್ ಹೇಮಾವತಿ ನಿರ್ದೇಶನದ 'ಸಂಗ್ಯಾ ಬಾಳ್ಯಾ', ವಲ್ಲೀಶ ಶಾಸ್ತ್ರಿ ನಿರ್ದೇಶನದ 'ಶ್ರೀಕೃಷ್ಣ ಸಂಧಾನ', ವಿದ್ಯಾ ಹಣಬೆ ನಿರ್ದೇಶನದ 'ಮದುವೆ ಮದುವೆ' ನಾಟಕಗಳು ಉತ್ಸವವನ್ನು ಕಳೆಗಟ್ಟಿಸಲಿವೆ.

ಈ ನಾಟಕಗಳೊಂದಿಗೆ, ಮಕ್ಕಳು ಪಾಲ್ಗೊಳ್ಳುವ 'ವೇಷ ವೈಖರಿ' ಕಾರ್ಯಕ್ರಮ, ಅಂಜನಾ ಪ್ರಭಾಕರ್ ನಿರ್ದೇಶನದ 'ಕಿಸಾಗೋತಮಿ' ಸಂಗೀತ ರೂಪಕ, ಅಲಮೇಲು ಅಯ್ಯಂಗಾರ್ (ಪು.ತಿ.ನ. ಅವರ ಪುತ್ರಿ) ಪ್ರಸ್ತುತಪಡಿಸುವ 'ಗೋಕುಲ ನಿರ್ಗಮನ' ನೃತ್ಯ ರೂಪಕ, ಕೆ.ವಿ.ರಾಮಪ್ರಸಾದ್ ನಿರ್ದೇಶನದ 'ಕರ್ಣ ರಸಾಯನ' ಯಕ್ಷಗಾನ/ಗಮಕ ರೂಪಕಗಳ ಸವಿಯೂ ಇದೆ.

ಈ ಕಾರ್ಯಕ್ರಮಗಳ ಮೂಲಕ ಕನ್ನಡ ನಾಡು, ನುಡಿ, ಸಂಸ್ಕೃತಿಯನ್ನು ಬಿಂಬಿಸುವುದು 'ಕೆಕೆಎನ್‌ಸಿ' ಉದ್ದೇಶ.

ಅಮೆರಿಕದಲ್ಲಿ ನೆಲೆಸಿರುವ ಕನ್ನಡಿಗ ಕಲಾವಿದರು ಮಾತ್ರವಲ್ಲದೆ ತವರು ನೆಲದ ಕಲಾವಿದರೂ 'ಕನ್ನಡೋತ್ಸವ'ದಲ್ಲಿ ಭಾಗವಹಿಸುತ್ತಿದ್ದಾರೆ.

ಪಂಡಿತ್ ಪರಮೇಶ್ವರ ಹೆಗಡೆ ಅವರ ಶಾಸ್ತ್ರೀಯ ಸಂಗೀತ, ವಸುಂಧರಾ ದೊರೆಸ್ವಾಮಿ ಅವರ 'ನೂಪುರ' ನೃತ್ಯ, ಬೆಂಗಳೂರಿನ 'ಸಮರ್ಥನಂ' ಬಳಗದಿಂದ 'ಸಂತೃಪ್ತ ಸಂಜೆ' ಸಂಗೀತ ಕಾರ್ಯಕ್ರಮಗಳು ಉತ್ಸವದಲ್ಲಿ ನಡೆಯಲಿವೆ.

ದೂರದ ಅಮೆರಿಕನ್ನಡಿಗರು 'ಕನ್ನಡೋತ್ಸವ'ದ ಮೂಲಕ ಕರ್ನಾಟಕ ಏಕೀಕರಣದ ಸುವರ್ಣ ಮಹೋತ್ಸವದ ಸಂಭ್ರಮಕ್ಕೆ ಮುನ್ನುಡಿ ಬರೆಯುತ್ತಿದ್ದಾರೆ.

ಆದರೆ, ತವರು ಕನ್ನಡ ನೆಲದಲ್ಲಿ ಮಾತ್ರ ಸುವರ್ಣ ಮಹೋತ್ಸವದ ನೆನಪು ಯಾರಿಗೂ ಇದ್ದಂತಿಲ್ಲ.

...ಒಂದನೇ ಪುಟದಿಂದ

ಆಡಳಿತಕ್ಕೆ 'ಮೇಜರ್ ಸರ್ಜರಿ'

ವಿವೇಚನಾಧಿಕಾರದ ದುರುಪಯೋಗ ಹೆಚ್ಚಾಗಿರುವುದರಿಂದ ಇದನ್ನು ರದ್ದುಪಡಿಸಬೇಕು. ಭ್ರಷ್ಟರಿಗೆ ಶಿಕ್ಷೆಯೂ ನಿಧಾನವಾಗುತ್ತಿದೆ. ಬ್ರಿಟಿಷರ ಕಾಲದಿಂದಲೂ ರಕ್ಷಣಾ ಕವಚವಾಗಿರುವ ಸರ್ಕಾರಿ ಗೌಪ್ಯತಾ ಕಾಯ್ದೆ–1923 ಈಗಲೂ ಜಾರಿಯಲ್ಲಿರುವುದು ವಿಪರ್ಯಾಸ. ಇಂತಹ ಹಳೆಯ ನಿಯಮಗಳನ್ನೆಲ್ಲಾ ಹೊತ್ತು ಸಾಗಿದರೆ ಮುಳುಗಬೇಕಾಗುತ್ತದೆ. ಈಗಿನ ತಂತ್ರಜ್ಞಾನ, ಜನರಲ್ಲಿ ಅರಿವು ಮೂಡಿರುವ ಹಿನ್ನೆಲೆಯಲ್ಲಿ ಜನ ಮತ್ತು ಸರ್ಕಾರದ ನಡುವೆ ಗೋಡೆಯ ಅಗತ್ಯವಿಲ್ಲ.

ಯಾವುದು ಗೌಪ್ಯ, ಯಾವುದು ಗೌಪ್ಯವಲ್ಲ ಎಂಬ ಸ್ಪಷ್ಟ ವರ್ಗೀಕರಣ ಆಗಬೇಕು. ಈ ಎಲ್ಲ ಕ್ರಮಗಳಿಂದ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬಹುದು. ಪರಿಣಾಮಕಾರಿ ಆಡಳಿತ ನೀಡಲು ಭಾರಿ ಬದಲಾವಣೆ (ಮೇಜರ್ ಸರ್ಜರಿ) ಆಗಲೇಬೇಕು ಎಂಬುದು ನನ್ನ ಅಭಿಪ್ರಾಯ.

** ಆಡಳಿತ ಸುಧಾರಣೆ ಎಂದರೆ ಸಿಬ್ಬಂದಿ ಮತ್ತು ವೆಚ್ಚ ಕಡಿತ ಎಂಬ ಅಭಿಪ್ರಾಯವಿದೆ. ಸಿಬ್ಬಂದಿ ಸಂಖ್ಯೆ ಕಡಿಮೆಯಾದರೆ ಸಾಮಾಜಿಕ ನ್ಯಾಯಕ್ಕೆ ಧಕ್ಕೆಯಾಗುವುದಿಲ್ಲವೇ?*

ಆಡಳಿತದಲ್ಲಿ ವರ್ಣಾಶ್ರಮ ಪದ್ಧತಿ ಪಾಲನೆಯಾಗುತ್ತಿದೆ. ಬ್ರಿಟಿಷರಿಗೆ ಸೂಕ್ತವಾಗಿದ್ದ ಈ ವ್ಯವಸ್ಥೆ ನಮಗೆ ಬೇಕೇ? ಸಿಬ್ಬಂದಿ ಸಂಖ್ಯೆ ಕಡಿಮೆ ಮಾಡಬೇಕು ಅಥವಾ ಇಲಾಖೆಗಳನ್ನು ಮುಚ್ಚಬೇಕು ಅಥವಾ ಸಂಬಳ ಕಡಿಮೆ ಮಾಡಬೇಕು ಎಂಬುದು ನನ್ನ ಗುರಿಯಲ್ಲ. ನಾನು ಪೂರ್ವಗ್ರಹಪೀಡಿತನೂ ಅಲ್ಲ. ದೇಶದಲ್ಲಿ ಗ್ರಾಮ ಪಂಚಾಯ್ತಿಯಿಂದ ಹಿಡಿದು ಕೇಂದ್ರ ಸರ್ಕಾರದವರೆಗೆ ಎಲ್ಲ ಹಂತದಲ್ಲೂ ವಿಶ್ವ ದರ್ಜೆಯ ಆಡಳಿತ ಜಾರಿಯಾಗಬೇಕು. ಇದಕ್ಕಾಗಿ ಸಮಗ್ರ ಅಭಿವೃದ್ಧಿಯ ದೃಷ್ಟಿಕೋನ ಇಟ್ಟುಕೊಂಡು ವಸ್ತುನಿಷ್ಠವಾದ ವರದಿ ನೀಡಲಾಗುವುದು. ರಾಜಕೀಯ ಹುದ್ದೆಗಳೂ ಸೇರಿದಂತೆ ನಿಜವಾಗಲೂ ಅನಗತ್ಯ ಎಂದೆನಿಸಿದರೆ ಅಂತಹ ಹುದ್ದೆಗಳನ್ನು ರದ್ದುಪಡಿಸಲು ಸಲಹೆ ನೀಡಲಾಗುತ್ತದೆ. ಜನರಿಗೆ ಅಧಿಕಾರ ದೊರೆಯುವಂತಹ ಪರಿಸರವನ್ನು ನಿರ್ಮಿಸಿ, ಅವರೇ ಉದ್ಯೋಗ ಸೃಷ್ಟಿಸುವಂತೆ ಮಾಡಬೇಕು ಎಂಬುದು ನನ್ನ ಉದ್ದೇಶ.

** ಈಗಿನ ವ್ಯವಸ್ಥೆಯಲ್ಲಿ ಆಡಳಿತದಲ್ಲಿ ದಕ್ಷತೆಯನ್ನು ಹೆಚ್ಚಿಸಲು ಸಾಧ್ಯವೇ?*

ಅಧಿಕಾರಿಗಳು–ನೌಕರರು ತಮ್ಮ ಕೆಲಸದ ವೇಳೆಯಲ್ಲಿ ಕಚೇರಿಯಲ್ಲಿ ಲಭ್ಯವಿರಬೇಕು. ಸಾರ್ವಜನಿಕರ ಅಹವಾಲು ಕೇಳಲೇಬೇಕು. ಕರ್ತವ್ಯದ ಅವಧಿಯಲ್ಲಿ ಅವರ ಕಾರ್ಯವೈಖರಿಯನ್ನು ಖಾಸಗಿ ಸಂಸ್ಥೆಗಳ ರೀತಿಯಲ್ಲಿಯೇ ಅಳೆಯಬೇಕು. ಸರ್ಕಾರಿ ವ್ಯವಸ್ಥೆಯಲ್ಲಿ ಪ್ರಶಸ್ತಿ, ಶಿಕ್ಷೆ ಎರಡೂ ಇಲ್ಲದಿರುವುದರಿಂದ ಆಡಳಿತ ಶಿಥಿಲವಾಗಿದೆ. ನೌಕರರು ತಮ್ಮ ಕರ್ತವ್ಯ ನಿರ್ವಹಿಸದಿದ್ದರೆ ಶಿಕ್ಷೆ ಆಗಲೇಬೇಕು. ಕಾರ್ಯವೈಖರಿ ಅಳೆಯಲು ಸಾಧನೆಯೇ ಮಾಪಕವಾಗಬೇಕು.

** ಪ್ರಥಮ ಆಯೋಗ ನೀಡಿದ ಶಿಫಾರಸುಗಳನ್ನು ಸರ್ಕಾರ ಪೂರ್ಣವಾಗಿ ಜಾರಿ ಮಾಡಿದೆಯೇ? ಅನೇಕ ಆಯೋಗಗಳು, ಸಮಿತಿಗಳು ನೀಡಿದ ವರದಿ ದೂಳು ತಿನ್ನುತ್ತಿರುವಾಗ ನೀವು ಕೊಡುವ ವರದಿ ಅನುಷ್ಠಾನವಾಗಲಿದೆ ಎಂಬ ವಿಶ್ವಾಸವಿದೆಯೇ?*

40 ವರ್ಷಗಳ ಹಿಂದಿನ ಆಶಯಗಳೇ ಬೇರೆ ಆಗಿದ್ದವು. ಈಗ ತಕ್ಷಣ ಪರಿಹಾರ ಬೇಕು ಎಂದು ಜನತೆ ಬಯಸುತ್ತಾರೆ. ಈಗ ಕಡತಗಳ ಅಗತ್ಯವೂ ಇಲ್ಲ. ಇ–ಮೇಲ್ ಮೂಲಕವೇ ಅರ್ಜಿ ಸ್ವೀಕರಿಸಿ, ವಿಲೇವಾರಿ ಮಾಡಬಹುದು. ಈ ನಿಟ್ಟಿನಲ್ಲಿ ಆಯೋಗ ನೀಡುವ ವರದಿ ಪೂರ್ಣವಾಗಿ ಜಾರಿಯಾಗಲಿದೆ ಎಂಬ ವಿಶ್ವಾಸವಿದೆ.

ಆಡಳಿತ ಸುಧಾರಣೆ ಕುರಿತು ಆಯೋಗದ ಹಿಂದಿನ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದ ಮೊರಾರ್ಜಿ ದೇಸಾಯಿ, ಕೆಂಗಲ್ ಹನುಮಂತಯ್ಯ ಅವರು ನೀಡಿರುವ ವರದಿ, ಅವುಗಳ ಜಾರಿಯ ಮಟ್ಟ, ಬೇರೆ ಬೇರೆ ವಿಷಯಗಳಿಗೆ ಸಂಬಂಧಿಸಿದಂತೆ ಬೇರೆ ಸಮಿತಿಗಳು ನೀಡಿರುವ ವರದಿ ಪರಿಶೀಲಿಸಿ, ಈಗಿನ ಪರಿಸ್ಥಿತಿಯಲ್ಲಿ ಆಡಳಿತಕ್ಕೆ ಯಾವ ರೀತಿ ಹೊಂದಿಕೊಳ್ಳುತ್ತವೆ ಎಂಬುದನ್ನು ಪರಿಶೀಲಿಸಲಾಗುವುದು. ಅಗತ್ಯಬಿದ್ದರೆ ಸಂವಿಧಾನಕ್ಕೆ ತಿದ್ದುಪಡಿ ತರಲೂ ಸಲಹೆ ನೀಡಲಾಗುತ್ತದೆ. ಹೆಚ್ಚು ಪರಿಣಾಮಕಾರಿಯಾದ ಸಲಹೆಗಳನ್ನು ನೀಡಿದಾಗ ಯಾರೂ ಆಕ್ಷೇಪಿಸುವುದಿಲ್ಲ.

** ಭ್ರಷ್ಟಾಚಾರಕ್ಕೆ ಈಗಿನ ಚುನಾವಣಾ ವ್ಯವಸ್ಥೆಯೂ ಕಾರಣ. ಅದರ ಸುಧಾರಣೆಗೂ ಸಲಹೆ ನೀಡುತ್ತೀರಾ?*

ಯಾರೂ ತಮ್ಮ ವಿವೇಚನೆ ಬಳಸಿ ಇನ್ನೊಬ್ಬರಿಗೆ ಲಾಭ ಮಾಡಿಕೊಡಲಾಗದಂತಹ ಬಿಗಿ ವ್ಯವಸ್ಥೆ ನಿರ್ಮಾಣವಾದರೆ ಇದಕ್ಕೆ ಕಡಿವಾಣ ಬೀಳುತ್ತದೆ.

** ನಿಮ್ಮ ಹಳೆಯ ಅನುಭವ ಬಳಸಿಕೊಂಡು ಸಂಪನ್ಮೂಲ ಕ್ರೋಡೀಕರಣ ಮತ್ತು ತೆರಿಗೆ ಸುಧಾರಣೆಗೂ ಸಲಹೆ ನೀಡುವಿರಾ?*

ತೆರಿಗೆ ಸುಧಾರಣೆ ಕುರಿತು ನಾನು ನೀಡಿದ ಶಿಫಾರಸು ಪ್ರಕಾರ ಮೌಲ್ಯವರ್ಧಿತ ತೆರಿಗೆ ಪದ್ಧತಿಯನ್ನು ರಾಜ್ಯದಲ್ಲಿ ಜಾರಿಗೊಳಿಸಲಾಗಿದೆ. ಇದರಿಂದ ವರಮಾನ ಅಧಿಕವಾಗಿದೆ. ಹೆಚ್ಚು ತೆರಿಗೆ ವಿಧಿಸದೆಯೇ ಹೆಚ್ಚು ವರಮಾನ ಗಳಿಸಲು ಸಾಧ್ಯವಾಗುವ ವ್ಯವಸ್ಥೆ ಇದು. ದಂತಗೋಪುರದಲ್ಲಿ ಕುಳಿತು ಯೋಜನೆ ರೂಪಿಸುವುದಲ್ಲ. ಜನರ ನಡುವೆ ಬೆರೆತು ಕಾರ್ಯಕ್ರಮ ರೂಪಿಸಿದರೆ ಅದರಿಂದ ಯಶ ಗಳಿಸಬಹುದು. ಅದೇ ರೀತಿ ಕೇಂದ್ರ ಆಡಳಿತ ಸುಧಾರಣಾ ಆಯೋಗದಲ್ಲೂ ತಜ್ಞರಿದ್ದಾರೆ. ಇವರ ಸೇವೆಯನ್ನು ಬಳಸಿಕೊಂಡು ಅಧಿಕಾರಿಗಳಿಗೆ ಅಧಿಕಾರ ನೀಡಿ, ಹೊಣೆಗಾರಿಕೆ ನಿಗದಿಪಡಿಸಿ, ಸಾಧನೆ ಮಾಡಿ ತೋರಿಸಲು ಸೂಚಿಸಲಾಗುವುದು. ಆಗ ಮಾತ್ರ ಯಶಸ್ಸು ಗಳಿಸಲು ಸಾಧ್ಯ.

** ಸಮ್ಮಿಶ್ರ ಸರ್ಕಾರದ ಪಾಲುದಾರ ಪಕ್ಷವಾದ ದಳ (ಎಸ್) ವಿರುದ್ಧ ಮಾತನಾಡುವ ಕಾಂಗ್ರೆಸ್ ಮುಖಂಡರಿಗೆ ಬೇರೆ ಉದ್ಯೋಗ ತೋರಿಸುವ ಸಲುವಾಗಿ ಈ ನೇಮಕ ಮಾಡಲಾಗಿದೆ ಎಂಬ ಭಾವನೆಯಿದೆ. ನಿಮ್ಮ ಅಭಿಪ್ರಾಯವೇನು?*

ಈ ಹುದ್ದೆ ನ್ಯಾಯಮೂರ್ತಿ ದರ್ಜೆಯ ಹುದ್ದೆಯಲ್ಲ. ನಾನು ಹಿಂದೆಯೂ ರಾಜಕಾರಣದಲ್ಲಿ ಸಕ್ರಿಯನಾಗಿದ್ದೆ. ಈಗಲೂ ಸಕ್ರಿಯನಾಗಿದ್ದೇನೆ. ಮುಂದೆಯೂ ಹಾಗೇ ಇರುತ್ತೇನೆ. ನನ್ನ ಸ್ವಾತಂತ್ರ್ಯಕ್ಕೆ ಕಡಿವಾಣ ಹಾಕಿಲ್ಲ. ಪಕ್ಷದ ವಿರುದ್ಧ ಯಾರಾದರೂ ದನಿ ಎತ್ತಿದಾಗ ಅದನ್ನು ಖಂಡಿಸಲೇಬೇಕಾಗುತ್ತದೆ. ಆ ಕೆಲಸವನ್ನು ಮುಂದೆಯೂ ಮಾಡುತ್ತೇನೆ.

ನೈರುತ್ಯ ರೈಲ್ವೆ

ಇಂಜಿನಿಯರಿಂಗ್ ಶಾಖೆ/ಮೈಸೂರು ವಿಭಾಗ

ಟೆಂಡರ್ ಪ್ರಕಟಣೆ ಸಂಖ್ಯೆ 10/ಎಂವೈಎಸ್/2005 ದಿನಾಂಕ 24-08-2005

ವಿಭಾಗೀಯ ರೈಲ್ವೆ ಮ್ಯಾನೇಜರ್ (ವರ್ಕ್ಸ್), ನೈರುತ್ಯ ರೈಲ್ವೆ, ಮೈಸೂರು ಇವರು ಈ ಕೆಳಗೆ ತಿಳಿಸಿರುವ ಕೆಲಸಗಳಿಗೆ ಪ್ರತ್ಯೇಕ ಮೊಹರಾದ ಟೆಂಡರುಗಳನ್ನು ಆಹ್ವಾನಿಸಿದ್ದಾರೆ ಹಾಗೂ ಟೆಂಡರುಗಳನ್ನು ಪ್ರತಿಯೊಂದು ಕೆಲಸದ ಮುಂದೆ ತಿಳಿಸಿರುವ ದಿನಾಂಕಗಳಂದು 15-00 ಗಂಟೆವರೆಗೆ ಸ್ವೀಕರಿಸಲಾಗುವುದು ಮತ್ತು 15-30 ಗಂಟೆಗೆ ತೆರೆಯಲಾಗುವುದು.

ಕ್ರಮ ಸಂಖ್ಯೆ 1. ಕೆಲಸದ ವಿವರ: ಮೈಸೂರು-ಪ್ಲಾಟ್‌ಫಾರಂ ಸಂಖ್ಯೆ 2 ಮತ್ತು 3ರಲ್ಲಿ ಆರ್‌ಸಿಸಿ ಪ್ಲಾಟ್‌ಫಾರಂ ಶೆಲ್ಟರ್‌ನ ರಿಪ್ಲಾಸ್ಟರಿಂಗ್ ಹಾಗೂ ವೆದರ್ ಪ್ರೂಫ್ ಕೋರ್ಸ್ ವ್ಯವಸ್ಥೆ (ಡಿಡಬ್ಲ್ಯುಪಿ ಐಟಂ ನ. 5348); ಕೆಲಸದ ಅಂದಾಜು ಮೌಲ್ಯ ರೂ. 3,44,645/-. ಅರ್ನೆಸ್ಟ್ ಹಣ ಠೇವಣಿ (ಇಎಂಡಿ) ರೂ. 8,700/-. ಟೆಂಡರ್ ಫಾರಂ ಬೆಲೆ: ರೂ. 550/-. ಟೆಂಡರ್ ತೆರೆಯುವ ದಿನಾಂಕ: 05-10-2005.

ಕ್ರಮ ಸಂಖ್ಯೆ 2. ಕೆಲಸದ ವಿವರ: ಮೈಸೂರು-ಲೋಕೊ ಕಾಲೋನಿ ಮತ್ತು ವಿಆರ್ ಕಾಲೋನಿಯಲ್ಲಿ ಸಿಬ್ಬಂದಿ ವಸತಿಗೃಹಗಳಿಗೆ ಸ್ಟೀಲ್ ಬ್ಯಾಕ್ ಯಾರ್ಡ್ ಡೋರ್‌ಗಳ ವ್ಯವಸ್ಥೆ. ಕೆಲಸದ ಅಂದಾಜು ಮೌಲ್ಯ ರೂ. 3,08,114/-. ಅರ್ನೆಸ್ಟ್ ಹಣ ಠೇವಣಿ (ಇಎಂಡಿ) ರೂ. 7,750/-. ಟೆಂಡರ್ ಫಾರಂ ಬೆಲೆ: ರೂ. 550/-. ಟೆಂಡರ್ ತೆರೆಯುವ ದಿನಾಂಕ: 05-10-2005.

ಕ್ರಮ ಸಂಖ್ಯೆ 3. ಕೆಲಸದ ವಿವರ: ಮೈಸೂರು-ಮೂಲ ತರಬೇತಿ ಕೇಂದ್ರಕ್ಕೆ ಸುಧಾರಣೆಗಳು (ಡಿಡಬ್ಲ್ಯುಪಿ ಸಂಖ್ಯೆ 04-05ರ 4212). ಕೆಲಸದ ಅಂದಾಜು ಮೌಲ್ಯ ರೂ. 3,01,523/-. ಅರ್ನೆಸ್ಟ್ ಹಣ ಠೇವಣಿ (ಇಎಂಡಿ) ರೂ. 7,550/-. ಟೆಂಡರ್ ಫಾರಂ ಬೆಲೆ: ರೂ. 550/-. ಟೆಂಡರ್ ತೆರೆಯುವ ದಿನಾಂಕ: 05-10-2005.

ಕ್ರಮ ಸಂಖ್ಯೆ 4. ಕೆಲಸದ ವಿವರ: ಅಶೋಕಪುರಂ-ಸಿಬ್ಬಂದಿ ವಸತಿಗೃಹಗಳ ಸಂಖ್ಯೆ 26, 99 ರಿಂದ 109, 110 ರಿಂದ 115, 118, 119, 123 ರಿಂದ 148 ಮತ್ತು 150ರ ಸೋರುತ್ತಿರುವ ಫ್ಲ್ಯಾಟ್ ರೂಫ್‌ಗೆ ದುರಸ್ತಿಗಳು. ಕೆಲಸದ ಅಂದಾಜು ಮೌಲ್ಯ ರೂ. 13,01,470/-. ಅರ್ನೆಸ್ಟ್ ಹಣ ಠೇವಣಿ (ಇಎಂಡಿ) ರೂ. 20,000/-. ಟೆಂಡರ್ ಫಾರಂ ಬೆಲೆ: ರೂ. 1,100/-. ಟೆಂಡರ್ ತೆರೆಯುವ ದಿನಾಂಕ: 05-10-2005.

ಕ್ರಮ ಸಂಖ್ಯೆ 5. ಕೆಲಸದ ವಿವರ: ಅಶೋಕಪುರಂ-ರೈಲ್ವೆ ಕಾಲೋನಿಯಲ್ಲಿ ಸಿಬ್ಬಂದಿ ವಸತಿಗೃಹಗಳನ್ನು ಹೊಳಪುಗೊಳಿಸುವುದು. ಕೆಲಸದ ಅಂದಾಜು ಮೌಲ್ಯ ರೂ. 7,30,673/-. ಅರ್ನೆಸ್ಟ್ ಹಣ ಠೇವಣಿ (ಇಎಂಡಿ) ರೂ. 14,700/-. ಟೆಂಡರ್ ಫಾರಂ ಬೆಲೆ: ರೂ. 1,100/-. ಟೆಂಡರ್ ತೆರೆಯುವ ದಿನಾಂಕ: 05-10-2005.

ಕ್ರಮ ಸಂಖ್ಯೆ 6. ಕೆಲಸದ ವಿವರ: ಹಾಸನ-ಹಾಸನ-ಸಕಲೇಶಪುರ ಕಚೇರಿಯಲ್ಲಿ ಸೆಕ್ಷನ್ ಇಂಜಿನಿಯರ್/ಪರ್ಮನೆಂಟ್ ವೇ ಇವರಿಗೆ ಹಾಗೂ ಹಾಸನದಲ್ಲಿನ ಸ್ಟೋರ್‌ಗೆ ಕಾಂಪೌಂಡ್ ಗೋಡೆ ನಿರ್ಮಾಣ.

ಹಾಸನ ಸೆಕ್ಷನ್-ಹಾಸನ, ಹೊಳೇನರಸೀಪುರ, ಬಾಗೇಶಪುರ ಮತ್ತು ದುದ್ದ ಸ್ಟೇಷನ್‌ಗಳಲ್ಲಿ ಟೈಪ್-I ಮತ್ತು ಟೈಪ್-II ವಸತಿಗೃಹಗಳನ್ನು ಹೊಳಪುಗೊಳಿಸುವುದು, ವೈಟ್‌ವಾಷಿಂಗ್, ಕಲರ್ ವಾಷಿಂಗ್ ಮತ್ತು ಬಾಗಿಲುಗಳ ಪೈಂಟಿಂಗ್.

ಹಾಸನ: ಹಾಸನ ಕಾಲೋನಿಯಲ್ಲಿ ತುಕ್ಕುಹಿಡಿದ ಪೈಪ್‌ಲೈನ್‌ಗಳ ಬದಲಾವಣೆ.

ಸಕಲೇಶಪುರ ಉಪ-ವಿಭಾಗ: ಸಕಲೇಶಪುರ, ಆಲೂರು ಮತ್ತು ಬಾಳ್ಳುಪೇಟೆ ಸ್ಟೇಷನ್‌ಗಳಲ್ಲಿ ಟೈಪ್-I, II, III ಮತ್ತು IV ಸಿಬ್ಬಂದಿ ವಸತಿಗೃಹಗಳ ಹಾಗೂ ತಾತ್ಕಾಲಿಕ ಷೆಡ್‌ಗಳ ಹೊಳಪುಗೊಳಿಸುವಿಕೆ. ಕೆಲಸದ ಅಂದಾಜು ಮೌಲ್ಯ ರೂ. 8,62,300/-. ಅರ್ನೆಸ್ಟ್ ಹಣ ಠೇವಣಿ (ಇಎಂಡಿ) ರೂ. 17,500/-. ಟೆಂಡರ್ ಫಾರಂ ಬೆಲೆ: ರೂ. 1,100/-. ಟೆಂಡರ್ ತೆರೆಯುವ ದಿನಾಂಕ: 05-10-2005.

ಕ್ರಮ ಸಂಖ್ಯೆ 7. ಕೆಲಸದ ವಿವರ: ಅರಸೀಕೆರೆ-ಸಿಬ್ಬಂದಿ ವಸತಿಗೃಹಗಳ ಸಂಖ್ಯೆ 213 ರಿಂದ 222ರ ವರೆಗೆ (3520ಎಂ ಉದ್ದಕ್ಕೆ) ಕಾಲೋನಿಯ ಹಾಲಿ ಅಸ್ಫಾಲ್ಟ್ ರಸ್ತೆಗೆ ದುರಸ್ತಿಗಳು ಮತ್ತು ಮಕಾಡಂ ರಸ್ತೆಯ ಅಸ್ಫಾಲ್ಟಿಂಗ್ ಮತ್ತು ಶಿವಮೊಗ್ಗ ಟೌನ್: ರೈಲ್ವೆ ಕಾಲೋನಿ ರಸ್ತೆಯ ಅಸ್ಫಾಲ್ಟಿಂಗ್ ಸೇರಿದಂತೆ ರಸ್ತೆ ಮೇಲ್ಮೈ ದುರಸ್ತಿಗಳು. ಕೆಲಸದ ಅಂದಾಜು ಮೌಲ್ಯ ರೂ. 14,09,314/-. ಅರ್ನೆಸ್ಟ್ ಹಣ ಠೇವಣಿ (ಇಎಂಡಿ) ರೂ. 20,000/-. ಟೆಂಡರ್ ಫಾರಂ ಬೆಲೆ: ರೂ. 1,100/-. ಟೆಂಡರ್ ತೆರೆಯುವ ದಿನಾಂಕ: 05-10-2005.

ಕ್ರಮ ಸಂಖ್ಯೆ 8. ಕೆಲಸದ ವಿವರ: ಅರಸೀಕೆರೆ-ರನ್ನಿಂಗ್ ರೂಂಗೆ (ಡಿಡಬ್ಲ್ಯುಪಿ 6429) ಸುಧಾರಣೆಗಳು ಮತ್ತು ಅರಸೀಕೆರೆ ಸಿಕ್ ಲೈನ್‌ಗೆ ಸುಧಾರಣೆಗಳು (03-04ರ ಐಟಂ ಸಂಖ್ಯೆ 4219). ಕೆಲಸದ ಅಂದಾಜು ಮೌಲ್ಯ ರೂ. 6,00,676/-. ಅರ್ನೆಸ್ಟ್ ಹಣ ಠೇವಣಿ (ಇಎಂಡಿ) ರೂ. 12,100/-. ಟೆಂಡರ್ ಫಾರಂ ಬೆಲೆ: ರೂ. 1,100/-. ಟೆಂಡರ್ ತೆರೆಯುವ ದಿನಾಂಕ: 05-10-2005.

ಕ್ರಮ ಸಂಖ್ಯೆ 9. ಕೆಲಸದ ವಿವರ: ಕೃಷ್ಣರಾಜನಗರ-ವಸತಿಗೃಹಗಳ ಸಂಖ್ಯೆ 25 ಮತ್ತು 26ರ ಬದಲಿಗೆ ಸಿಬ್ಬಂದಿ ವಸತಿಗೃಹಗಳ ವಿಧ-III-02 ಯುನಿಟ್‌ಗಳ ಉದ್ದೇಶಿತ ಪುನರ್ ನಿರ್ಮಾಣ (ಡಿಡಬ್ಲ್ಯುಪಿ 5104/04-05). ಕೆಲಸದ ಅಂದಾಜು ಮೌಲ್ಯ ರೂ. 8,03,790/-. ಅರ್ನೆಸ್ಟ್ ಹಣ ಠೇವಣಿ (ಇಎಂಡಿ) ರೂ. 16,100/-. ಟೆಂಡರ್ ಫಾರಂ ಬೆಲೆ: ರೂ. 1,100/-. ಟೆಂಡರ್ ತೆರೆಯುವ ದಿನಾಂಕ: 07-10-2005.

ಕ್ರಮ ಸಂಖ್ಯೆ 10. ಕೆಲಸದ ವಿವರ: ತುಮಕೂರು-ಅರಸೀಕೆರೆ ಸೆಕ್ಷನ್-ಕಡ್ರಿ, ಮತ್ತು ತಿಪಟೂರ್ ಸ್ಟೇಷನ್‌ಗಳ ನಡುವೆ-ಎಇಇ/ಕೆಯುಡಬ್ಲ್ಯುಎಸ್ ಮತ್ತು ಡಿಬಿ ವಿಭಾಗ/ತುಮಕೂರಿಗೆ 350 ಮಿಮೀ ವ್ಯಾಸದ ಎಂಎಸ್ ನೀರು ಸರಬರಾಜು ಪೈಪ್‌ಲೈನ್ ಹಾಕಲು ಕಿಮೀ 139/2-3ರಲ್ಲಿ ಉದ್ದೇಶಿತ 1x0.75 ಎಂಎಂಎಸ್ ಪೈಪ್. ಕೆಲಸದ ಅಂದಾಜು ಮೌಲ್ಯ ರೂ. 2,10,399/-. ಅರ್ನೆಸ್ಟ್ ಹಣ ಠೇವಣಿ (ಇಎಂಡಿ) ರೂ. 5,300/-. ಟೆಂಡರ್ ಫಾರಂ ಬೆಲೆ: ರೂ. 550/-. ಟೆಂಡರ್ ತೆರೆಯುವ ದಿನಾಂಕ: 07-10-2005.

ಕ್ರಮ ಸಂಖ್ಯೆ 11. ಕೆಲಸದ ವಿವರ: ಮೈಸೂರು-ಅರಸೀಕೆರೆ ಸೆಕ್ಷನ್- ಕಿಮೀ 36/8-12 ನಡುವೆ ಗರ್ಡರ್ ಸೇತುವೆ ಸಂಖ್ಯೆ 242 ಕಿಮೀ 132/3-4ರಲ್ಲಿ ಸೇತುವೆ ಸಂಖ್ಯೆ 44 ಹಾಗೂ ಕಿಮೀ 43/13-14ರಲ್ಲಿ ಬೀರೂರು-ತಾಳಗುಪ್ಪ ಸೆಕ್ಷನ್-ಸೇತುವೆ 59 ಸಂಖ್ಯೆ ಹಾಗೂ ಬೀರೂರು-ಶಿವಮೊಗ್ಗ ಟೌನ್ ಸೆಕ್ಷನ್ನಿನಲ್ಲಿನ ಕಿಮೀ 61/8-9ರಲ್ಲಿ ಸೇತುವೆ ಸಂಖ್ಯೆ 85ರ ಪೈಂಟಿಂಗ್. ಕೆಲಸದ ಅಂದಾಜು ಮೌಲ್ಯ ರೂ. 4,09,253/-. ಅರ್ನೆಸ್ಟ್ ಹಣ ಠೇವಣಿ (ಇಎಂಡಿ) ರೂ. 10,000/-. ಟೆಂಡರ್ ಫಾರಂ ಬೆಲೆ: ರೂ. 550/-. ಟೆಂಡರ್ ತೆರೆಯುವ ದಿನಾಂಕ: 07-10-2005.

ಕ್ರಮ ಸಂಖ್ಯೆ 12. ಕೆಲಸದ ವಿವರ: ಭದ್ರಾವತಿ ಮತ್ತು ಶಿವಮೊಗ್ಗ ಟೌನ್ ಗ್ರಾಸ್ ಪಾಯಿಂಟ್‌ಗಳು ಮತ್ತು ಸಿಗ್ನಲ್‌ಗಳ ಕೇಂದ್ರೀಕೃತ ಕಾರ್ಯಾಚರಣೆಯೊಂದಿಗೆ ಸಿಗ್ನಲಿಂಗ್ ಗೇರ್‌ಗಳ ಬದಲಾವಣೆ (ಪಿ.ಬಿ. ನಂ. 03-04ರ ಐಟಂ ಸಂಖ್ಯೆ 148). ಕೆಲಸದ ಅಂದಾಜು ಮೌಲ್ಯ ರೂ. 24,35,344/-. ಅರ್ನೆಸ್ಟ್ ಹಣ ಠೇವಣಿ (ಇಎಂಡಿ) ರೂ. 24,400/-. ಟೆಂಡರ್ ಫಾರಂ ಬೆಲೆ: ರೂ. 1,650/-. ಟೆಂಡರ್ ತೆರೆಯುವ ದಿನಾಂಕ: 07-10-2005.

ಕ್ರಮ ಸಂಖ್ಯೆ 13. ಕೆಲಸದ ವಿವರ: ಬೀರೂರು-ಶಿವಮೊಗ್ಗ ಟೌನ್-ಭದ್ರಾವತಿ ಮತ್ತು ಶಿವಮೊಗ್ಗ ಸ್ಟೇಷನ್‌ಗಳ ನಡುವೆ-ಸೇತುವೆ ಸಂಖ್ಯೆ 88 (ಹಾಲಿ 2x1.20ಎಂ ಸ್ಟೋನ್ ಸ್ಲ್ಯಾಬ್) ಕಿಮೀ 62/1-2 ರಲ್ಲಿ 1x3.00 ಎಂ ಆರ್‌ಸಿಸಿ ಬಾಕ್ಸ್ ಆಗಿ ಉದ್ದೇಶಿತ ಪುನರ್ ನಿರ್ಮಾಣ (ಡಿಡಬ್ಲ್ಯುಪಿ 04-05ರ ಐಟಂ ಸಂಖ್ಯೆ 319). ಕೆಲಸದ ಅಂದಾಜು ಮೌಲ್ಯ ರೂ. 7,82,355/-. ಅರ್ನೆಸ್ಟ್ ಹಣ ಠೇವಣಿ (ಇಎಂಡಿ) ರೂ. 15,700/-. ಟೆಂಡರ್ ಫಾರಂ ಬೆಲೆ: ರೂ. 1,100/-. ಟೆಂಡರ್ ತೆರೆಯುವ ದಿನಾಂಕ: 07-10-2005.

ಕ್ರಮ ಸಂಖ್ಯೆ 14. ಕೆಲಸದ ವಿವರ: ಅಶೋಕಪುರಂ-ಸೆಂಟ್ರಲ್ ವರ್ಕ್‌ಷಾಪ್/ಅಶೋಕಪುರಂ ಇಲ್ಲಿನ ವಿವಿಧ ಷಾಪ್‌ಗಳಲ್ಲಿ ಫ್ಲೋರಿಂಗ್‌ಗೆ ಸುಧಾರಣೆಗಳು. ಕೆಲಸದ ಅಂದಾಜು ಮೌಲ್ಯ ರೂ. 23,08,286/-. ಅರ್ನೆಸ್ಟ್ ಹಣ ಠೇವಣಿ (ಇಎಂಡಿ) ರೂ. 23,100/-. ಟೆಂಡರ್ ಫಾರಂ ಬೆಲೆ: ರೂ. 1,650/-. ಟೆಂಡರ್ ತೆರೆಯುವ ದಿನಾಂಕ: 07-10-2005.

ಕ್ರಮ ಸಂಖ್ಯೆ 15. ಕೆಲಸದ ವಿವರ: ಅಶೋಕಪುರಂ-ಸೆಂಟ್ರಲ್ ವರ್ಕ್‌ಷಾಪ್/ಅಶೋಕಪುರಂ ಇಲ್ಲಿ ವ್ಹೀಲ್‌ಗಳ ಗುಣಮಟ್ಟದ ಸುತ್ತುವಿಕೆಗೆ ರೋಲರ್ ಬೇರಿಂಗ್ ಸೆಕ್ಷನ್ನಿಗಾಗಿ ಸೌಲಭ್ಯಗಳು. ಕೆಲಸದ ಅಂದಾಜು ಮೌಲ್ಯ ರೂ. 21,73,824/-. ಅರ್ನೆಸ್ಟ್ ಹಣ ಠೇವಣಿ (ಇಎಂಡಿ) ರೂ. 21,800/-. ಟೆಂಡರ್ ಫಾರಂ ಬೆಲೆ: ರೂ. 1,650/-. ಟೆಂಡರ್ ತೆರೆಯುವ ದಿನಾಂಕ: 07-10-2005.

(ಒಟ್ಟು ಐಟಂಗಳು: 15 (ಹದಿನೈದು ಮಾತ್ರ)

ಸೂಚನೆ: (1) ತಿಳಿಸಿರುವ ಟೆಂಡರ್ ಫಾರಂ ಬೆಲೆಯನ್ನು ಹಿಂದಿರುಗಿಸುವುದಿಲ್ಲ ಮತ್ತು ಮಾರಾಟ ತೆರಿಗೆ ಒಳಗೊಂಡಿರುತ್ತದೆ. (2) ಟೆಂಡರ್ ಫಾರಂ ಬೆಲೆಯನ್ನು ವಿಭಾಗೀಯ ಕ್ಯಾಷಿಯರ್, ನೈರುತ್ಯ ರೈಲ್ವೆ, ಮೈಸೂರು ಇವರಿಗೆ ಅಥವಾ ನೈರುತ್ಯ ರೈಲ್ವೆಯಲ್ಲಿನ ಯಾವುದೇ ಸ್ಟೇಷನ್ ಮಾಸ್ಟರ್‌ಗೆ ಪಾವತಿಸಬಹುದು ಹಾಗೂ ಆ ಬಗ್ಗೆ ಪಡೆದ ರಶೀತಿಯನ್ನು ಟೆಂಡರ್ ಫಾರಂ ನೀಡಿಕೆಗೆ ಸಲ್ಲಿಸುವ ಮನವಿ ಜೊತೆ ಲಗತ್ತಿಸಬೇಕು. (3) ಟೆಂಡರ್ ಫಾರಂ ನೀಡಿಕೆಯನ್ನು ಟೆಂಡರ್ ತೆರೆಯುವ ಹಿಂದಿನ ದಿನದಂದು 13-00 ಗಂಟೆಗೆ ಮುಕ್ತಾಯಗೊಳಿಸಲಾಗುವುದು. (4) ಇಎಂಡಿಯನ್ನು ವಿಭಾಗೀಯ ಕ್ಯಾಷಿಯರ್, ನೈರುತ್ಯ ರೈಲ್ವೆ, ಮೈಸೂರು ಇವರು ಟೆಂಡರ್ ತೆರೆಯುವ ದಿನಾಂಕದಂದು 13-00 ಗಂಟೆವರೆಗೆ ಮಾತ್ರ ಸ್ವೀಕರಿಸುವರು. (5) ತಡವಾದ/ವಿಳಂಬವಾದ/ಅಂಚೆ ಮೂಲಕ ವಿಳಂಬವಾಗಿ ತಲುಪುವ ಟೆಂಡರುಗಳನ್ನು ತಿರಸ್ಕರಿಸಲಾಗುವುದು. (6) ಬ್ಯಾಂಕ್ ಗ್ಯಾರಂಟಿ ಬಾಂಡ್ ರೂಪದಲ್ಲಿ ಇಎಂಡಿಯನ್ನು ಅಂಗೀಕರಿಸುವುದಿಲ್ಲ. (7) ಒಂದಕ್ಕಿಂತ ಹೆಚ್ಚಿನ ಕೆಲಸಕ್ಕೆ ಅವರ ಟೆಂಡರುಗಳನ್ನು ಸಲ್ಲಿಸುವ ಟೆಂಡರುದಾರರು ಅಗತ್ಯವಾದ ಇಎಂಡಿ ಮತ್ತು ಐಟಿಸಿಸಿ ಅನುಭವ ಪ್ರಮಾಣ ಪತ್ರ ಮತ್ತು ಸಾಲ್ವೆನ್ಸಿ ಪ್ರಮಾಣ ಪತ್ರಗಳ ದೃಢೀಕೃತ ಪ್ರತಿಗಳನ್ನು ಪ್ರತಿಯೊಂದು ಕೆಲಸಕ್ಕೂ ಪ್ರತ್ಯೇಕವಾಗಿ ಸಲ್ಲಿಸಬೇಕು. (8) ಅಂಚೆಯ ಮೂಲಕ ಟೆಂಡರ್ ಫಾರಂ ಪಡೆಯಲಪೇಕ್ಷಿಸುವ ಟೆಂಡರುದಾರರು ಟೆಂಡರ್ ಫಾರಂಗಳಿಗೆ ತಿಳಿಸಿರುವ ಶುಲ್ಕದ ಜೊತೆಗೆ ರೂ. 100/- ಅನ್ನು ಅಧಿಕವಾಗಿ ಪಾವತಿಸಬೇಕು. (9) ಟೆಂಡರ್ ಸ್ವೀಕರಿಸುವ ಮತ್ತು ತೆರೆಯುವ ದಿನಾಂಕಗಳು ಯಾವುದೇ ಕಾರಣಕ್ಕೆ ಘೋಷಿತ ರಜೆ ದಿನವಾದಲ್ಲಿ ಟೆಂಡರನ್ನು ತಕ್ಷಣದ ಮುಂದಿನ ಕೆಲಸದ ದಿನದಂದು ತೆರೆಯಲಾಗುವುದು. (10) ಅಂಚೆಯ ಮೂಲಕದ ಟೆಂಡರುಗಳಾದಲ್ಲಿ ಕಳುಹಿಸುವಾಗ ಮತ್ತು ವಾಪಸ್ಸು ಕಳುಹಿಸುವಾಗ ಉಂಟಾಗಬಹುದಾದ ವಿಳಂಬಕ್ಕೆ ರೈಲ್ವೆ ಜವಾಬ್ದಾರಿಯಾಗುವುದಿಲ್ಲ. (11) ಈ ಟೆಂಡರ್‌ಗೆ ಪಾವತಿಮಾಡಿರುವ ಒಟ್ಟಾರೆ ಇಎಂಡಿ ಅನ್ವಯವಾಗುವುದಿಲ್ಲ ಮತ್ತು ಎಲ್ಲಾ ಟೆಂಡರುದಾರರು ಪ್ರತಿಯೊಂದು ಕೆಲಸಕ್ಕೆ ಪ್ರತ್ಯೇಕವಾಗಿ ಅಗತ್ಯ ಇಎಂಡಿ ಸಲ್ಲಿಸಬೇಕು. ಕ್ರಮಬದ್ಧವಾಗಿರದ ಇಎಂಡಿಯೊಂದಿಗೆ ಟೆಂಡರುಗಳು ಬಂದರೆ ತಿರಸ್ಕರಿಸಲಾಗುವುದು. (12) ರೂ. 10 ಲಕ್ಷಗಳಿಗೂ ಮೇಲ್ಪಟ್ಟ ವೆಚ್ಚದ ಎಲ್ಲಾ ಕಾಮಗಾರಿಗಳಿಗೆ ಅರ್ಹತಾ ಅಗತ್ಯತೆ. ಟೆಂಡರುದಾರರು ಕೆಲಸಕ್ಕೆ ಅರ್ಹವಾಗಲು ಈ ಕೆಳಗೆ ತಿಳಿಸಿರುವ ಅರ್ಹತಾ ಅಗತ್ಯಗಳನ್ನು ತೃಪ್ತಿಪಡಿಸಬೇಕು. ಈ ಅಗತ್ಯಗಳನ್ನು ತೃಪ್ತಿಪಡಿಸದಿರುವ ಟೆಂಡರುದಾರರ ಟೆಂಡರುಗಳನ್ನು ತಿರಸ್ಕರಿಸಲಾಗುವುದು.

ಕ್ರಮ ಸಂಖ್ಯೆ 1 ಷರತ್ತು: ಸಾಲ್ವೆನ್ಸಿ ವಿವರ: ರೆವಿನ್ಯು/ಬ್ಯಾಂಕರ್ಸ್ ಸಾಲ್ವೆನ್ಸಿ ಪ್ರಮಾಣ ಪತ್ರ; ಅಗತ್ಯತೆ (ಐಟಂ ನಂ. 4, 7, 12, 14 ಮತ್ತು 15ಕ್ಕೆ) ಅಗತ್ಯವಿಲ್ಲ. ಟ್ರ್ಯಾಕ್ ಹಾಗೂ ಸೇತುವೆ ಕಾಮಗಾರಿಗಳಿಗೆ ಅಗತ್ಯತೆ (ಐಟಂ ನಂ. 10, 11 ಮತ್ತು 13ಕ್ಕೆ) ಕೆಲಸದ ಜಾಹೀರಾತು ಪಡಿಸಿರುವ ಟೆಂಡರ್ ಮೌಲ್ಯದ ಶೇ 40.

ಕ್ರಮ ಸಂಖ್ಯೆ 2 ಷರತ್ತು: ಅನುಭವ ವಿವರ: ಕಳೆದ ಮೂರು ಆರ್ಥಿಕ ವರ್ಷಗಳಲ್ಲಿ (ಎಂದರೆ ಪ್ರಸಕ್ತ ವರ್ಷ ಹಾಗೂ ಹಿಂದಿನ ಮೂರು ಆರ್ಥಿಕ ವರ್ಷಗಳು): ಅಗತ್ಯತೆ (ಐಟಂ ನಂ. 4, 7, 12, 14 ಮತ್ತು 15ಕ್ಕೆ) ಕೆಲಸದ ಜಾಹೀರಾತುಪಡಿಸಿರುವ ಟೆಂಡರ್ ಮೌಲ್ಯದ ಶೇ 35 ರಷ್ಟು ಕನಿಷ್ಠ ಮೌಲ್ಯದ ಕನಿಷ್ಠ ಇದೇ ಸ್ವರೂಪದ ಒಂದು ಕೆಲಸ. ಟ್ರ್ಯಾಕ್ ಹಾಗೂ ಸೇತುವೆ ಕೆಲಸಗಳಿಗೆ ಅಗತ್ಯತೆ (ಐಟಂ ನಂ. 10, 11 ಮತ್ತು 13ಕ್ಕೆ) ತಕ್ಷಣದ ಹಿಂದಿನ 2 ವರ್ಷಗಳಲ್ಲಿ ಜಾಹೀರಾತುಪಡಿಸಿರುವ ಟೆಂಡರ್ ಮೌಲ್ಯದ ಶೇ 50 ರಷ್ಟು ಮೌಲ್ಯದ ಇದೇ ಸ್ವರೂಪದ ಒಂದು ಕೆಲಸ ಅಥವಾ ಪ್ರಸಕ್ತ ವರ್ಷ ಹಾಗೂ ಹಿಂದಿನ ಮೂರು ಆರ್ಥಿಕ ವರ್ಷಗಳಲ್ಲಿ ಕೆಲಸದ ಮೌಲ್ಯದ ಶೇ 100 ರಷ್ಟು ಒಟ್ಟಾರೆ ಮೌಲ್ಯದ 3 ಇದೇ ಸ್ವರೂಪದ ಕೆಲಸಗಳು.

ಕ್ರಮ ಸಂಖ್ಯೆ 3 ಷರತ್ತು: ಐಟಿಸಿಸಿ: ವಿವರ: ಕಳೆದ 3 ವರ್ಷಗಳವಧಿಯಲ್ಲಿ ಹಾಗೂ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸ್ವೀಕರಿಸಿರುವ ಒಟ್ಟು ಗುತ್ತಿಗೆ ಮೊತ್ತ: ಅಗತ್ಯತೆ (ಐಟಂ ನಂ. 4, 7, 12, 14 ಮತ್ತು 15ಕ್ಕೆ) ಜಾಹೀರಾತು ಪಡಿಸಿರುವ ಟೆಂಡರ್ ಮೌಲ್ಯದ ಕನಿಷ್ಠ 150% ಆಗಿರಬೇಕು. ಈ ಬಗ್ಗೆ ಟೆಂಡರುದಾರರು ಪ್ರಮಾಣ ಪತ್ರ ಹಾಜರುಪಡಿಸಬೇಕು. ಇದನ್ನು ಉದ್ಯೋಗದಾತರು/ ಕ್ಲೈಂಟ್‌ರಿಂದ ದೃಢೀಕರಿಸಿರಬೇಕು. ಚಾರ್ಟರ್ಡ್ ಅಕೌಂಟೆಂಟ್‌ರಿಂದ ಕ್ರಮವಾಗಿ ದೃಢೀಕರಿಸಿದ ಪರಿಶೋಧಿತ ಬ್ಯಾಲೆನ್ಸ್ ಶೀಟ್ ಲಗತ್ತಿಸಬೇಕು. ಟ್ರ್ಯಾಕ್ ಮತ್ತು ಸೇತುವೆ ಕೆಲಸಗಳಿಗೆ ಅಗತ್ಯತೆ (ಐಟಂ ನಂ. 10, 11 ಮತ್ತು 13ಕ್ಕೆ) ಜಾಹೀರಾತುಪಡಿಸಿರುವ ಟೆಂಡರ್ ಮೌಲ್ಯದ ಕನಿಷ್ಠ ಶೇ. 150 ಟೆಂಡರುದಾರರು ಈ ಬಗ್ಗೆ ಪ್ರಮಾಣ ಪತ್ರ ಹಾಜರುಪಡಿಸಬೇಕು ಹಾಗೂ ಇದನ್ನು ಉದ್ಯೋಗದಾತರು/ ಕ್ಲೈಂಟ್‌ರಿಂದ ದೃಢೀಕರಿಸಿರಬೇಕು ಅಥವಾ ಚಾರ್ಟರ್ಡ್ ಅಕೌಂಟೆಂಟ್ ಇತ್ಯಾದಿಯವರಿಂದ ಕ್ರಮವಾಗಿ ದೃಢೀಕರಿಸಿದ ಪರಿಶೋಧಿತ ಬ್ಯಾಲೆನ್ಸ್‌ಶೀಟ್ ಇತ್ಯಾದಿ ಸಲ್ಲಿಸಬಹುದು.

(13) ಟೆಂಡರ್ ಪತ್ರಗಳು ವೆಬ್‌ಸೈಟ್‌ನಲ್ಲಿ ಲಭ್ಯವಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಪತ್ರಗಳನ್ನು ಪಡೆಯುವ ಟೆಂಡರುದಾರರು ಟೆಂಡರ್ ಫಾರಂ ಜೊತೆಗೆ ತಿಳಿಸಿರುವ ಟೆಂಡರ್ ಬೆಲೆ ಬಗ್ಗೆ ಪ್ರತ್ಯೇಕವಾದ ಡಿಮಾಂಡ್ ಡ್ರಾಫ್ಟ್ ಅನ್ನು ಲಗತ್ತಿಸಬೇಕು.

ನಮ್ಮನ್ನು ವೆಬ್‌ಸೈಟಿನಲ್ಲಿ ಭೇಟಿ ಮಾಡಿ: MYSOREDIVISION.ORG

ವಿಭಾಗೀಯ ರೈಲ್ವೆ ಮ್ಯಾನೇಜರ್ (ವರ್ಕ್ಸ್)
ನೈರುತ್ಯ ರೈಲ್ವೆ, ಮೈಸೂರು

ಹೆಚ್.ಪಿಯುಬಿ/782/05-06

ಭಾರತೀಯ ರೈಲ್ವೆಯ ಪ್ರಗತಿಯಲ್ಲಿ ಪಾಲುದಾರರಾಗಿ